ಆಧ್ಯಾತ್ಮಗ್ರಂಥಾವಳಿ

# ವೇದಾಂತದರ್ಶನ

(ಬ್ರಹ್ಮಸೂತ್ರಗಳ ಮೊದಲನೆಯ ಪರಿಚಯ)

ಬರೆದವರು :
**ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ : ೭೯

**ಪ್ರಕಾಶಕರು :**
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573211
2001

# ಬಿನ್ನಹ

**ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿ**ಗಳವರು ತಮ್ಮ ಪೂರ್ವಾಶ್ರಮದಲ್ಲಿ ಬರೆದು ಪ್ರಕಟಿಸಿದ್ದ ಈ ಗ್ರಂಥದ ಪ್ರತಿಗಳೆಲ್ಲ ಮುಗಿದುಹೋಗಿದ್ದುದರಿಂದ ತಿದ್ದಿ ಶೋಧಿಸಿ ಈಗ ಪ್ರಕಟಿಸಲಾಗಿದೆ.

ಕಾರ್ಯಾಲಯದ ಪಂಡಿತರಾದ ಅಧ್ಯಾತ್ಮವಿದ್ಯಾಪ್ರವೀಣ **ಶ್ರೀ ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿ**ಗಳು ಗ್ರಂಥವನ್ನು ಶೋಧಿಸಿ ಅಚ್ಚಿನ ಕರಡುಗಳನ್ನು ತಿದ್ದಿ ಸಿದ್ಧಗೊಳಿಸಿರುತ್ತಾರೆ.

ಎಂದಿನಂತೆ ಈ ಗ್ರಂಥದ ಎಲ್ಲಾ ಹಕ್ಕುಗಳನ್ನೂ ಶ್ರೀಶ್ರೀಗಳವರು ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೇ ಸಮರ್ಪಿಸಿದ್ದಾರೆ.

ವಾಚಕರು ಈ ಪುಸ್ತಕವನ್ನು ಸ್ವಾಗತಿಸಿ ಪ್ರೋತ್ಸಾಹಿಸುವರೆಂದು ನಂಬಲಾಗಿದೆ.

**25-3-2001** **ಪ್ರಕಾಶಕರು**

# ಮೊದಲ ಮಾತು

(ಒಂದನೆಯ ಮುದ್ರಣದಿಂದ ಸಂಗ್ರಹಿಸಿದ್ದು)

ಬ್ರಹ್ಮಸೂತ್ರಗಳ ಪಾಠವನ್ನು ಮತತ್ರಯದ ಆಚಾರ್ಯರುಗಳು ಕೊಟ್ಟಿರುವದರಲ್ಲಿ ಅಲ್ಲಲ್ಲಿ ಸ್ವಲ್ಪ ಮಾರ್ಪಾಟುಗಳಿವೆ. ಸೂತ್ರಗಳ ಸಂಖ್ಯೆಯೂ ಅಧಿಕರಣಗಳ ವಿಂಗಡವೂ ಬೇರೆಬೇರೆಯಾಗಿರುತ್ತವೆ. ಈ ತಾರತಮ್ಯದ ವಿವರವನ್ನು ಈ ಚಿಕ್ಕ ಪುಸ್ತಕದಲ್ಲಿ ಕೊಟ್ಟಿರುವದಿಲ್ಲ. ಸೂತ್ರಪಾಠವನ್ನು ಅಧ್ಯಾಯ, ಪಾದ, ಸೂತ್ರ- ಈ ಸಂಖ್ಯೆಗಳಿಂದ ತೋರಿಸುವಾಗ ಆಯಾ ಆಚಾರ್ಯರ ಮತದಂತೆಯೇ ತೋರಿಸಿರುತ್ತದೆ.

**ಸುಪ್ರಸಿದ್ಧರಾದ ಮೂವರು ಆಚಾರ್ಯರುಗಳ ಮತದಂತೆ ವೇದಾಂತಸಿದ್ಧಾಂತವು ಹೇಗಿರುವದು ?- ಎಂಬ ಪ್ರಶ್ನೆಗೆ ಉತ್ತರವು ವಾಚಕರಿಗೆ ಸ್ಥೂಲವಾಗಿ ತಿಳಿದಿರಲೆಂಬ ಆಶೆಯಿಂದ ಈ ಚಿಕ್ಕ ಪುಸ್ತಕವನ್ನು ಬರೆದಿದೆ.**

ವಿಷಯಪ್ರತಿಪಾದನೆಯಲ್ಲಿ ಕಂಡುಬರುವ ಲೋಪದೋಷಗಳನ್ನು ತಿಳಿಸಬೇಕೆಂದು ಪ್ರಾಜ್ಞರನ್ನು ಪ್ರಾರ್ಥಿಸುತ್ತೇನೆ.

**ಗ್ರಂಥಕರ್ತ**

1944.

# ವೇದಾಂತ ದರ್ಶನ

## ವಿಷಯಾನುಕ್ರಮಣಿಕೆ

ಬಿನ್ನಹ
ಮೊದಲಮಾತು

1. ಪೀಠಿಕೆ
2. ಅನುಬಂಧ ಚತುಷ್ಟಯ
3. ಬ್ರಹ್ಮವೂ ಜಗತ್ತೂ
4. ಬ್ರಹ್ಮವೂ ಜೀವವೂ
5. ಬ್ರಹ್ಮಾತ್ಮಜ್ಞಾನ
6. ಉಪಾಸನೆ
7. ಮುಕ್ತಿಸಾಧನ
8. ಫಲವಿಚಾರ

ಪರಿಶಿಷ್ಟ - ೧ ಶ್ರೀರಾಮಾನುಜಾಚಾರ್ಯರ ಮತದಂತೆ
ಪರಿಶಿಷ್ಟ - ೨ ಶ್ರೀಮಧ್ವಾಚಾರ್ಯರ ಮತದಂತೆ

ಕೆಲವು ಉಪಯುಕ್ತ ಗ್ರಂಥಗಳು

|| ಓಮ್ ||

# ವೇದಾಂತದರ್ಶನ

## ೧. ಪೀಠಿಕೆ

**ವೇದಾಂತದರ್ಶನ :**

ವೇದಾಂತವೆಂದರೆ ಉಪನಿಷತ್ತುಗಳು. ವೇದದಲ್ಲಿ ಸಂಹಿತೆ, ಬ್ರಾಹ್ಮಣ, ಆರಣ್ಯಕ - ಎಂಬ ಮುಖ್ಯವಾದ ಮೂರು ಭಾಗಗಳಿವೆ. ಆರಣ್ಯಕದಲ್ಲಿರುವ ಆತ್ಮನ ವಿಚಾರವಾಗಿರುವ ಗ್ರಂಥಭಾಗಕ್ಕೆ **ಉಪನಿಷತ್ತು** ಎಂದು ಹೆಸರು. ವೇದಾಂತ ಎಂಬ ಮಾತಿಗೆ ವೇದದ ಕೊನೆ ಎಂದರ್ಥವಾಗುವದಲ್ಲವೆ ? ಉಪನಿಷತ್ತುಗಳು ಬಲುಮಟ್ಟಿಗೆ ವೇದದ ಕೊನೆಯ ಭಾಗವಾದ ಆರಣ್ಯಕದಲ್ಲಿರುವದರಿಂದ ಅವುಗಳಿಗೆ **ವೇದಾಂತ** ಎಂಬ ಹೆಸರು ಬಂದಿರುತ್ತದೆ. ಉಪನಿಷತ್ತುಗಳ ಸಾರವು **ಭಗವದ್ಗೀತೆ**ಯಲ್ಲಿಯೂ ಇದೆ. ಆದ್ದರಿಂದ ಗೀತೆಗೆ 'ಭಗವದ್ಗೀತೋಪನಿಷತ್ತು' ಎಂಬ ಹೆಸರೂ ಉಂಟು. ಉಪನಿಷತ್ತುಗಳಲ್ಲಿಯೂ ಗೀತೆಯಲ್ಲಿಯೂ ಯಾವ ತತ್ತ್ವವನ್ನು ಹೇಳಿದೆ ? ಆ ಉಪದೇಶವು ಯುಕ್ತ್ಯನುಭವಗಳಿಗೆ ಹೊಂದುವದೆ ? ಅದನ್ನು ಯಾವ ಸಾಧನಗಳಿಂದ ಕಂಡುಕೊಳ್ಳಬಹುದು ? ಅದನ್ನು ಕಂಡುಕೊಂಡರೆ ಆಗುವ ಪ್ರಯೋಜನವೇನು ?- ಎಂಬುದನ್ನು ನಿರ್ಣಯಿಸುವ ಶಾಸ್ತ್ರಕ್ಕೆ **ವೇದಾಂತ ದರ್ಶನ**ವೆಂದು ಹೆಸರು. ಭರತಖಂಡದ ಆಸ್ತಿಕರಲ್ಲಿ - ಎಂದರೆ ವೇದ ಪ್ರಾಮಾಣ್ಯವನ್ನು ಒಪ್ಪಿರುವವರಲ್ಲಿ ಆರು ಬಗೆಯ ದರ್ಶನಗಳಿವೆ. ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸೆ, ಉತ್ತರಮೀಮಾಂಸೆ- ಇವೇ **ಷಡ್ದರ್ಶನ**ಗಳೆಂಬ ಹೆಸರಿನಿಂದ ಪ್ರಖ್ಯಾತವಾಗಿರುವ ಆರು ದರ್ಶನಗಳು. ಇವುಗಳಲ್ಲಿ ಕೊನೆಯ ಎರಡೂ ವೇದವಾಕ್ಯಗಳನ್ನು ಕುರಿತೇ ವಿಚಾರಮಾಡುವದರಿಂದ ಅವಕ್ಕೆ **ಮೀಮಾಂಸೆ** ಎಂಬ

ಬಂದಿರುತ್ತದೆ. ಆದರೆ ಆರನೆಯದಾದ ಉತ್ತರಮೀಮಾಂಸೆಯು ವೇದಾಂತಗಳ ಎಂದರೆ ಉಪನಿಷತ್ತುಗಳ ತಾತ್ಪರ್ಯವನ್ನೇ ಮುಖ್ಯವಾಗಿ ವಿಚಾರ ಮಾಡುತ್ತಿರುವದರಿಂದ ಅದಕ್ಕೆ **ವೇದಾಂತದರ್ಶನ**ವೆಂಬ ಹೆಸರು ಬಂದಿರುತ್ತದೆ.

## ಬ್ರಹ್ಮಸೂತ್ರಗಳು :

ಪೂಜ್ಯರಾದ **ಬಾದರಾಯಣಾಚಾರ್ಯರು** ವೇದಾಂತದರ್ಶನವನ್ನು ೫೫೫ ಸೂತ್ರಗಳಲ್ಲಿ ರಚಿಸಿರುತ್ತಾರೆ. ಸೂತ್ರವೆಂದರೆ ಸಾರವತ್ತಾದ ವಿಷಯವನ್ನು ಸಂದೇಹವುಂಟಾಗದಂತೆ ಸ್ವಲ್ಪದರಲ್ಲಿ ತಿಳಿಸುವ ವಾಕ್ಯವು. ಉಪನಿಷತ್ತುಗಳಲ್ಲಿ ಹೇಳಿರುವ ಪರಮತತ್ತ್ವಕ್ಕೆ 'ಬ್ರಹ್ಮ'ವೆಂಬ ಹೆಸರಿರುವದರಿಂದ ವೇದಾಂತಸೂತ್ರಗಳನ್ನು **ಬ್ರಹ್ಮಸೂತ್ರ**ಗಳೆಂದೂ ಕರೆಯುತ್ತಾರೆ. ಈವರೆಗೆ ತಿಳಿಸಿರುವಂತೆ ಉಪನಿಷತ್ತುಗಳಲ್ಲಿ ಹೇಳಿರುವದರ ಸಾರವನ್ನೇ ಗೀತೆಯಲ್ಲಿಯೂ ತಿಳಿಸಿರುವದರಿಂದಲೂ ಅದನ್ನೇ ಬ್ರಹ್ಮಸೂತ್ರಗಳಲ್ಲಿ ಯುಕ್ತಿಗಳಿಂದ ನಿರ್ಣಯಿಸಿರುವದರಿಂದಲೂ ಉಪನಿಷತ್ತುಗಳು, ಗೀತೆ, ಬ್ರಹ್ಮಸೂತ್ರಗಳು- ಈ ಮೂರನ್ನೂ **ಪ್ರಸ್ಥಾನತ್ರಯ** ಎಂದು ಕರೆಯುತ್ತಾರೆ. ಪ್ರಸ್ಥಾನವೆಂದರೆ ತತ್ತ್ವವನ್ನು ತಿಳಿಸುವದಕ್ಕೆ ಹೊರಟಿರುವ ರೀತಿ.

## ಈ ಪುಸ್ತಕದ ಉದ್ದೇಶ :

ಉಪನಿಷತ್ತುಗಳೂ ಗೀತೆಯೂ ಸಂಸ್ಕೃತದಲ್ಲಿರುವಂತೆ ಬ್ರಹ್ಮಸೂತ್ರಗಳೂ ಆ ಭಾಷೆಯಲ್ಲಿಯೇ ಇರುತ್ತವೆ. ಸಂಸ್ಕೃತವು ತಿಳಿಯುವವರಿಗೆ ಕೂಡ ಅತಿಸಂಕ್ಷಿಪ್ತವಾಗಿರುವ ಬ್ರಹ್ಮಸೂತ್ರಗಳ ಅರ್ಥವನ್ನು ತಿಳಿದುಕೊಳ್ಳುವದು ಕಷ್ಟವಾಗಿರುತ್ತದೆ. ಆದ್ದರಿಂದ ಈ ಸೂತ್ರಗಳಿಗೆ ಅನೇಕ ಆಚಾರ್ಯರುಗಳು ಭಾಷ್ಯವನ್ನು ಬರೆದಿರುತ್ತಾರೆ. ಭರತಖಂಡದ ದಕ್ಷಿಣಭಾಗದಲ್ಲಿ ಪ್ರಸಿದ್ಧರಾದ ಶ್ರೀಶಂಕರಾಚಾರ್ಯರು, ಶ್ರೀರಾಮಾನುಜಾಚಾರ್ಯರು, ಶ್ರೀಮಧ್ವಾಚಾರ್ಯರು- ಈ ಮೂವರ ಭಾಷ್ಯವು ಈಗ ನಮ್ಮ ದೇಶದಲ್ಲೆಲ್ಲ ಹರಡಿರುತ್ತದೆ. ಈ ಮೂವರು ಆಚಾರ್ಯರುಗಳ ಮತವನ್ನು ನಂಬಿ ನಡೆಯುವವರು ಹಲವರು ಈ ದೇಶದಲ್ಲಿದ್ದಾರೆ. ಆದರೆ ಅವರಲ್ಲನೇಕರಿಗೆ

ಸಂಸ್ಕೃತವು ತಿಳಿಯುವದಿಲ್ಲ. ಅಂಥವರಿಗಾಗಿ ದೇಶಭಾಷೆಗಳಲ್ಲಿ ಗ್ರಂಥಗಳು ಅವಶ್ಯವಾಗಿರುತ್ತದೆ. ಈ ಚಿಕ್ಕ ಪುಸ್ತಕದಲ್ಲಿ ನಾವು ವೇದಾಂತ ದರ್ಶನದ ಸಾರವನ್ನು ಶ್ರೀಶಂಕರಾಚಾರ್ಯರ ಅಭಿಪ್ರಾಯಕ್ಕನುಗುಣವಾಗಿ ವಿವರಿಸಿರುತ್ತೇವೆ. ಆದರೆ ಪರಿಶಿಷ್ಟದಲ್ಲಿ ಮಿಕ್ಕ ಇಬ್ಬರು ಆಚಾರ್ಯರ ಅಭಿಪ್ರಾಯಗಳನ್ನೂ ಬಹುಸಂಗ್ರಹವಾಗಿ ಕೊಟ್ಟಿರುತ್ತೇವೆ.

## ವಿಚಾರಮಾಡಬೇಕಾದ ಕ್ರಮ :

ವೇದಾಂತದರ್ಶನವನ್ನು ವಿಂಗಡಿಸಿಕೊಂಡು ವಿಚಾರಮಾಡುವದು ಜಿಜ್ಞಾಸುಗಳಿಗೆ ಉಪಯೋಗವಾಗುತ್ತದೆ. ವೇದಾಂತದರ್ಶನವು ಹೇಳುವ ಮುಖ್ಯತತ್ತ್ವಕ್ಕೆ ಬ್ರಹ್ಮವೆಂದು ಹೆಸರು. ಈ ಇಡಿಯ ಜಗತ್ತಿನ ತಿರುಳು ನಿಜವಾಗಿ ಬ್ರಹ್ಮವೇ, ಬ್ರಹ್ಮವು ನಮ್ಮ ಆತ್ಮನೇ, ಅಂದರೆ ಸ್ವರೂಪವೇ- ಎಂಬುದು ಈ ದರ್ಶನದಲ್ಲಿ ಹೇಳಿರುವ ತತ್ತ್ವವಿಚಾರದ ಭಾಗವು. ಉಪನಿಷತ್ತುಗಳಲ್ಲಿಯೂ ಗೀತೆಯಲ್ಲಿಯೂ ಈ ತತ್ತ್ವವನ್ನೇ ಹೇಳಿದೆ. ಉಪದೇಶವು ನಮ್ಮ ಯುಕ್ತ್ಯನುಭವಗಳಿಗೆ ಹೊಂದಿಕೆಯಾಗಿದೆ- ಎಂದು ತಿಳಿಸಿಕೊಡುವ ಈ ಮೊದಲನೆಯ ಭಾಗಕ್ಕೆ **ತತ್ತ್ವವಿಚಾರಭಾಗ** ಎಂದು ಹೆಸರಿಡಬಹುದು. ಬ್ರಹ್ಮಸೂತ್ರದ ಮೊದಲನೆಯ ಅಧ್ಯಾಯದಲ್ಲಿ ಮುಖ್ಯವಾಗಿ ವೇದಾಂತವಾಕ್ಯಗಳು ಬ್ರಹ್ಮವನ್ನೇ ತಿಳಿಸುತ್ತವೆ ಎಂಬುದನ್ನು ತೋರಿಸಿ ಕೊಟ್ಟಿರುತ್ತದೆ. ಆದ್ದರಿಂದ ಆ ಅಧ್ಯಾಯಕ್ಕೆ **ಸಮನ್ವಯಾಧ್ಯಾಯ**ವೆಂದು ಹೆಸರು. ವೇದಾಂತದರ್ಶನವು ಯಾವ ಯುಕ್ತಿಗೂ ವಿರುದ್ಧವಲ್ಲವೆಂಬುದನ್ನು ಎರಡನೆಯ ಅಧ್ಯಾಯದಲ್ಲಿ ತೋರಿಸಿರುತ್ತದೆ. ಆದ್ದರಿಂದ ಈ ಅಧ್ಯಾಯಕ್ಕೆ **ಅವಿರೋಧಾಧ್ಯಾಯ**ವೆಂದು ಹೆಸರು.

ವೇದಾಂತದರ್ಶನದಲ್ಲಿ ಹೇಳಿರುವ ಬ್ರಹ್ಮವನ್ನು ವಿಚಾರದಿಂದ ನೇರಾಗಿ ಸಂಪೂರ್ಣವಾಗಿ ಅರಿತುಕೊಳ್ಳಲಾರದವರು ಅದನ್ನು ಉಪಾಸನೆ ಮಾಡಿ ಸದ್ಗತಿಯನ್ನು ಹೊಂದಬಹುದು ಎಂಬುದು ವೇದಾಂತದ ಎರಡನೆಯ ಉಪದೇಶವಾಗಿರುತ್ತದೆ. ಈ ಉಪದೇಶಗಳನ್ನೊಳಗೊಂಡ ಭಾಗಕ್ಕೆ **ಉಪಾಸನಾಭಾಗ** ಎಂದು ಹೆಸರಿಡಬಹುದು. ಬ್ರಹ್ಮಜ್ಞಾನಕ್ಕಾಗಲಿ ಬ್ರಹ್ಮದ ಉಪಾಸನೆಗಾಗಲಿ ಯಾರು ತಕ್ಕವರು ? ಮನಸ್ಸು ಯಾವ ಅಂತಸ್ತಿ

ನಲ್ಲಿರುವವರು ಜ್ಞಾನೋಪಾಸನೆಗಳಿಗೆ ಅಧಿಕಾರಿಗಳಾಗುವರು ? ಈ ಅಧಿಕಾರವನ್ನು ಪಡೆದುಕೊಳ್ಳುವದಕ್ಕೆ ನಾವು ಏನು ಮಾಡಬೇಕು ?- ಎಂಬುದನ್ನು ವಿವರಿಸುವದೂ ಈ ಭಾಗಕ್ಕೇ ಸೇರಿರುತ್ತದೆ. ಬ್ರಹ್ಮಸೂತ್ರದ ಮೂರನೆಯ ಅಧ್ಯಾಯದಲ್ಲಿ ಇದನ್ನೆಲ್ಲ ವಿವರಿಸಿರುವದರಿಂದ ಅದಕ್ಕೆ **ಸಾಧನಾಧ್ಯಾಯ**ವೆಂಬ ಹೆಸರು ಬಂದಿದೆ.

ವೇದಾಂತದರ್ಶನವನ್ನು ತಿಳಿದುಕೊಂಡು ಅದರಂತೆ ನಮ್ಮ ನಡೆನುಡಿಗಳನ್ನೂ ವಿಚಾರಗಳನ್ನೂ ಇಟ್ಟುಕೊಂಡರೆ ನಮಗೆ ಆಗುವ ಪ್ರಯೋಜನವೇನು ?- ಎಂಬುದನ್ನು ತಿಳಿಸುವ ಭಾಗವನ್ನು **ಪ್ರಯೋಜನ ಭಾಗ** ಎಂದು ಕರೆಯಬಹುದು. ಬ್ರಹ್ಮಸೂತ್ರದ ನಾಲ್ಕನೆಯ ಅಧ್ಯಾಯದಲ್ಲಿ ಈ ವಿಚಾರವಿದೆ. ಆದ್ದರಿಂದ ಅದಕ್ಕೆ **ಫಲಾಧ್ಯಾಯ**ವೆಂದು ಹೆಸರು.

ಬ್ರಹ್ಮಸೂತ್ರದ ಅಧ್ಯಾಯಗಳಲ್ಲಿ ಒಂದೊಂದಕ್ಕೂ ನಾಲ್ಕು ನಾಲ್ಕು ಪಾದಗಳಿವೆ ; ಒಂದೊಂದು ಪಾದದಲ್ಲಿರುವ ವಿಷಯವಿಚಾರದ ಒಳ ವಿಭಾಗಗಳನ್ನು ಇಲ್ಲಿ ನಾವು ವಿವರಿಸುವದಕ್ಕೆ ಹೋಗಿಲ್ಲ. ಒಂದೊಂದು ಅಧ್ಯಾಯದಲ್ಲಿರುವ ವಿಚಾರವನ್ನು ಕೂಡ ಅದೇ ಕ್ರಮದಲ್ಲಿ ತಿಳಿಸಿರುವದಿಲ್ಲ. ಈವರೆಗೆ ನಾವು ಹೇಳಿರುವ ತತ್ತ್ವವಿಚಾರ, ಉಪಾಸನೆ, ಪ್ರಯೋಜನ- ಎಂಬ ಮೂರು ವಿಭಾಗಗಳಲ್ಲಿ ವೇದಾಂತದರ್ಶನದ ಸ್ಥೂಲಪರಿಚಯವನ್ನು ಓದುಗರಿಗೆ ಮಾಡಿಕೊಡುವ ಯತ್ನವನ್ನಷ್ಟೇ ಇಲ್ಲಿ ಮಾಡಿರುತೇವೆ.

# ೨. ಅನುಬಂಧಚತುಷ್ಟಯ

## ಅನುಬಂಧವೆಂದರೇನು ?

ಯಾವದಾದರೊಂದು ಗ್ರಂಥದ ವಿಚಾರಕ್ಕೆ ಹೊರಡುವವನು 'ಇದು ಯಾರಿಗೋಸ್ಕರ ಹೊರಟಿದೆ ? ಇದಕ್ಕೂ ಮಿಕ್ಕ ಗ್ರಂಥಗಳಿಗ್ಗೂ ಸಂಬಂಧವೇನು ? ಇದರಲ್ಲಿ ಹೇಳಿರುವ ವಿಷಯವೇನು ? ಇದ

ರಿಂದುಂಟಾಗುವ ಫಲವೇನು ?'- ಎಂದು ನಾಲ್ಕು ಬಗೆಯ ಪ್ರಶ್ನೆಗಳನ್ನು ಮೊದಲು ತನಗೆ ತಾನೇ ಹಾಕಿಕೊಳ್ಳುತ್ತಾನೆ. ಗ್ರಂಥದಲ್ಲಿ ಈ ನಾಲ್ಕು ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರವು ಬಂದರೆ ಅವನು ಅದರ ಅಭ್ಯಾಸಕ್ಕೆ ಮನಸ್ಸುಹಾಕುತ್ತಾನೆ, ಇಲ್ಲದಿದ್ದರೆ ಇಲ್ಲ. ಆದ್ದರಿಂದ ಪ್ರತಿಯೊಂದು ಗ್ರಂಥಕ್ಕೂ ಸಂಬಂಧಪಟ್ಟಂತೆ ಈ ನಾಲ್ಕು ಪ್ರಶ್ನೆಗಳ ಉತ್ತರವಿರಬೇಕು. ಈ ಉತ್ತರಗಳೇ **ಅನುಬಂಧಗಳು**.

## ವಿದ್ಯೆಗೆ ಅಧಿಕಾರ :

ಮೊಟ್ಟಮೊದಲು ಈ ಅನುಬಂಧಗಳ ವಿಷಯವಾಗಿ ಸ್ವಲ್ಪದರಲ್ಲಿ ಹೇಳಿ ಮತ್ತೆ ಇವನ್ನು ವಿಸ್ತರಿಸಿ ತಿಳಿಸಿದರೆ ವಿಚಾರಮಾಡುವವರಿಗೆ ವಿಷಯ ಗ್ರಹಣೆಗೆ ಹೆಚ್ಚಿನ ಸೌಕರ್ಯವು ಉಂಟಾದೀತು. ಆದ್ದರಿಂದ ಇಲ್ಲಿ ಸಂಕ್ಷೇಪವಾಗಿ ಈ ನಾಲ್ಕು ಅನುಬಂಧಗಳನ್ನು ತಿಳಿಸುವೆವು. ವೇದಾಂತ ಶಾಸ್ತ್ರಕ್ಕೆ **ಅಥಾತೋ ಬ್ರಹ್ಮಜಿಜ್ಞಾಸಾ** ಎಂಬುದು ಮೊದಲನೆಯ ಸೂತ್ರವು, ಈ ಸೂತ್ರದಲ್ಲಿ **ಅಥ, ಅತಃ, ಬ್ರಹ್ಮ, ಜಿಜ್ಞಾಸಾ**- ಎಂಬ ನಾಲ್ಕು ಮಾತುಗಳಿವೆ. ಇವುಗಳಲ್ಲಿ ಅಥ- ಇನ್ನುಮೇಲೆ ಎಂಬುದು ಅಧಿಕಾರವನ್ನು ಸೂಚಿಸುವ ಮಾತು. ಅಧಿಕಾರಿಯಾಗುವದಕ್ಕೆ ಬೇಕಾದ ಗುಣಗಳೆಲ್ಲ ವನ್ನೂ ಸಂಪಾದಿಸಿಕೊಂಡಮೇಲೆಯೇ ಬ್ರಹ್ಮವಿಚಾರವನ್ನು ಮಾಡಬೇಕು. ಮಿಕ್ಕವರಿಗೆ ಇದರ ಮುಖ್ಯಪ್ರಯೋಜನವು ಆಗಲಾರದು. ನಿತ್ಯವಾದ ವಸ್ತು ಯಾವದು, ಅನಿತ್ಯವಾದದ್ದು ಯಾವದು ?- ಎಂಬ **ವಿವೇಕ**ವಿರಬೇಕು ; ಈ ಲೋಕದಲ್ಲಿ ಅಥವಾ ಪರಲೋಕದಲ್ಲಿ ಆಗುವ ಫಲಗಳನ್ನು ಅನುಭವಿಸಬೇಕೆಂಬ ತಹತಹದಿಂದ ಮನಸ್ಸು ಕುದಿಯದೆ ಇರುವದೆಂಬ **ವೈರಾಗ್ಯ**ವಿರಬೇಕು ; ಶಮ, ದಮ, ಉಪರತಿ, ತಿತಿಕ್ಷೆ, ಸಮಾಧಾನ, ಶ್ರದ್ಧೆ- ಎಂಬ **ಆರು ಗುಣ**ಗಳಿರಬೇಕು ; ಮೋಕ್ಷದಲ್ಲಿ ಹೆಚ್ಚಿನ **ಹಾತುವರಿಯುವಿಕೆ** ಯಿರಬೇಕು. ಈ **ನಾಲ್ಕು ಸಾಧನ**ಗಳು ಯಾರಿಗೆ ಅಳವಟ್ಟಿರುವವೋ ಅವರೇ ವೇದಾಂತದಲ್ಲಿ ಹೇಳಿರುವ ಬ್ರಹ್ಮವಿಚಾರಕ್ಕೆ ಅಧಿಕಾರಿಗಳು.

ಈ ಶಾಸ್ತ್ರದಲ್ಲಿ ಹೇಳಿರುವ ಬ್ರಹ್ಮವಿದ್ಯೆಗೆ ವೇದದಲ್ಲಿ ಅಧಿಕಾರವುಳ್ಳ ದ್ವಿಜರೇ ಅಧಿಕಾರಿಗಳೆಂದೂ ಆದ್ದರಿಂದ ವೇದಾಧಿಕಾರವಿಲ್ಲದ ಶೂದ್ರಾದಿಗಳಿಗೆ ಅಧಿಕಾರವಿಲ್ಲವೆಂದೂ ಬ್ರಹ್ಮಸೂತ್ರದಲ್ಲಿ (೧-೩-೩೪ ರಿಂದ ೩೮)[1] ನಿರ್ಣಯಿಸಲಾಗಿದೆ. ವೇದಾಂತಗಳ ಎಂದರೆ ಉಪನಿಷತ್ತುಗಳ ವಾಕ್ಯಗಳನ್ನು ವಿಚಾರಿಸಿ ತತ್ತ್ವವನ್ನು ತಿಳಿದುಕೊಳ್ಳಬೇಕಾಗಿರುವದರಿಂದ ವೇದವನ್ನು ಅಧ್ಯಯನಮಾಡುವ ಅಧಿಕಾರವಿಲ್ಲದವರಿಗೆ ಈ ವಿಚಾರದಲ್ಲಿ ಅಧಿಕಾರವಿಲ್ಲವೆಂಬುದು ಯುಕ್ತವಾಗಿ ತೋರುತ್ತದೆ. ಆದರೆ ಬ್ರಹ್ಮವೆಂಬುದು ಎಲ್ಲಾ ಜೀವರ ಆತ್ಮನೆಂದು ತಿಳಿಸುವದೇ ಈ ವೇದಾಂತದರ್ಶನದ ಮುಖ್ಯಗುರಿಯೆಂದು ಆಗಲೇ ಹೇಳಿರುತ್ತೇವೆ. ಆದ್ದರಿಂದ ತಮ್ಮತಮ್ಮ ಆತ್ಮನ ಎಂದರೆ ನಿಜವಾದ ಸ್ವರೂಪದ ವಿಚಾರವನ್ನು ಮಾಡುವದಕ್ಕೆ ತಮಗೇ ಅಧಿಕಾರವಿಲ್ಲವೆಂದು ಹೇಳಬಹುದೆ ?- ಎಂಬ ಶಂಕೆಯೊಂದು ಸಹಜವಾಗಿ ತಲೆದೋರುತ್ತದೆ. ಆ ಶಂಕೆಯು ಯುಕ್ತವಾಗಿಯೂ ಇದೆ. ಆದ್ದರಿಂದ ವೇದಮೂಲಕವಾಗಿ ಆತ್ಮತತ್ತ್ವವನ್ನು ಅರಿತುಕೊಳ್ಳುವದಕ್ಕೆ ಅಧಿಕಾರವಿಲ್ಲದಿದ್ದರೂ ಇತಿಹಾಸಪುರಾಣಾದಿಗಳ ಮೂಲಕವಾಗಿ ವಿಷಯವನ್ನು ತಿಳಿದುಕೊಂಡು ಗುರುವಿನ ಸಹಾಯದಿಂದಲೂ ತಮ್ಮ ಯುಕ್ತ್ಯನುಭವಗಳ ಬಲದಿಂದಲೂ ಅವರೂ ಆತ್ಮನ ನಿಜವನ್ನು ಕಂಡುಕೊಳ್ಳುವದಕ್ಕೆ ತಕ್ಕವರಾಗಿರುತ್ತಾರೆ- ಎಂದು ದೊಡ್ಡವರು ನಿರ್ಣಯಿಸಿರುತ್ತಾರೆ. ಆದ್ದರಿಂದ ವೇದಾಧ್ಯಯನದಿಂದ ಈ ವಿಚಾರಕ್ಕೆ ಹೆಚ್ಚಿನ ಪ್ರಯೋಜನವಿರಬಹುದಾದರೂ **ಬ್ರಹ್ಮವಿಚಾರವನ್ನು ಮಾಡುವದಕ್ಕೆ ಎಲ್ಲರಿಗೂ ಅಧಿಕಾರವುಂಟು ಎಂಬುದೇ ಸರಿಯಾದದ್ದು.** ಆದರೆ ಮೇಲೆ ಹೇಳಿರುವ ವಿವೇಕ, ವೈರಾಗ್ಯ- ಮುಂತಾದ ನಾಲ್ಕು ಸಾಧನಗಳು ಇಲ್ಲದಿದ್ದರೆ ಯಾರಿಗೂ ಬ್ರಹ್ಮವಿಚಾರವಾಗಲಿ ಅದರಿಂದಾಗುವ ಪ್ರಯೋಜನವಾಗಲಿ ದಕ್ಕಲಾರದೆಂಬುದು ನಿಶ್ಚಯವು.

1. ಇಲ್ಲ ಕೊಟ್ಟಿರುವ ಸಂಖ್ಯೆಗಳು ವೇದಾಂತಸೂತ್ರಗಳ ಅಧ್ಯಾಯ, ಪಾದ, ಸೂತ್ರ- ಇವುಗಳನ್ನು ಯಥಾಕ್ರಮವಾಗಿ ತಿಳಿಸುವವು. ಮುಂದೆಯೂ ಹೀಗೆಯೇ.

## ಶಾಸ್ತ್ರದ ವಿಷಯ :

ಈ ಶಾಸ್ತ್ರದಲ್ಲಿ ಬ್ರಹ್ಮವನ್ನು ಕುರಿತೇ ವಿಚಾರಮಾಡಿರುತ್ತದೆ. ಬ್ರಹ್ಮವು ನಮ್ಮ ಆತ್ಮನೇ ಆಗಿರುವದರಿಂದ, ಎಂದರೆ ನಾವೇ ಬ್ರಹ್ಮವಾಗಿರುವದರಿಂದ, ಬ್ರಹ್ಮವೆಂಬುದೇನೂ ಅತ್ಯಂತ ಅಪ್ರಸಿದ್ಧವಾದ ವಿಷಯವಲ್ಲ. ಆದರೆ ನಾನೆಂದರೆ ಯಾರು ? ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಜೀವ- ಎಂದು ನಾನಾಪ್ರಕಾರವಾಗಿ ನಾನೆಂಬ ಶಬ್ದಕ್ಕೆ ಅರ್ಥವನ್ನು ಜನರು ಮಾಡಿಕೊಳ್ಳುತ್ತಾರೆ. ಇವುಗಳಲ್ಲಿ ಯಾವದು ನಾನು ?- ಎಂಬುದನ್ನು ವಿಚಾರಮಾಡದೆ ನಡೆಯುವವನು ಸುಖವನ್ನು ಪಡೆಯಲಾರನು ; ದುಃಖವನ್ನೂ ಪಡೆಯಬಹುದು. ಆದ್ದರಿಂದ ಆತ್ಮನ ನಿಜವಾದ ಸ್ವರೂಪವನ್ನು ಕುರಿತು ವಿಚಾರಮಾಡಬೇಕು. ಆತ್ಮನು ಸಂಸಾರಿಯಲ್ಲ, ಎಂದರೆ ಕರ್ಮವನ್ನು ಮಾಡಿ ಫಲವನ್ನು ಪಡೆಯುವ ಸ್ವಭಾವದವನಲ್ಲ ; ಅವನು ಬ್ರಹ್ಮವು ಎಂದರೆ ಎಲ್ಲೆಲ್ಲಿಯೂ ಹಬ್ಬಿಕೊಂಡಿರುವ, ಎಲ್ಲಕ್ಕೂ ಜೀವಾಳವಾಗಿರುವ ಪರಮಾತ್ಮನು- ಎಂಬುದನ್ನು ತೋರಿಸಿಕೊಡುತ್ತೇವೆಂದು ವೇದಾಂತಿಗಳು ಹೇಳುತ್ತಾರೆ. ಇದನ್ನು ತಿಳಿದುಕೊಂಡರೆ ದುಃಖವಾಗುವದಕ್ಕೆ ಕಾರಣವಿಲ್ಲ. ಸುಖವಾಗುವದಕ್ಕೂ ಅವಕಾಶವಿದೆ. ಆದ್ದರಿಂದ ನಮ್ಮ ಆತ್ಮನು ನಿಜವಾಗಿ ಇಂಥ ಸ್ವರೂಪವುಳ್ಳವನೆ ?- ಎಂಬುದನ್ನು ವಿಚಾರಿಸಬೇಕು.

## ಪ್ರಯೋಜನ :

ಈ ವಿಚಾರದಿಂದ ಜ್ಞಾನವುಂಟಾಗುತ್ತದೆ. ಈ ಜ್ಞಾನವು ಯಾವಾಗಲೂ ಸಿದ್ಧವಾಗಿರುವ ನಿತ್ಯಾನಂದಸ್ವರೂಪವಾದ ನಮ್ಮ ಆತ್ಮನ ಜ್ಞಾನವಾಗಿರುವದರಿಂದ ಬ್ರಹ್ಮವಿಚಾರದಿಂದ ಪ್ರಯೋಜನವೂ ಉಂಟು. ಈ ಪರಮ ಪ್ರಯೋಜನಕ್ಕೆ ಮುಕ್ತಿ (೩-೪-೫೨) ಎಂದು ಹೆಸರು. ಬ್ರಹ್ಮವನ್ನು ನೇರಾಗಿ ತಿಳಿಯುವದಕ್ಕೆ ಅಧಿಕಾರವಿಲ್ಲದವರು ಅದನ್ನು ಉಪಾಸನೆಮಾಡಿದರೆ ಕ್ರಮಕ್ರಮವಾಗಿ ಅವರಿಗೂ ಮುಕ್ತಿಯುಂಟಾಗುತ್ತದೆ. ಆದ್ದರಿಂದ ಅಧಿಕಾರಿಗಳಾದವರು ಬ್ರಹ್ಮವಿಚಾರವನ್ನು ಮಾಡಬೇಕು.

**ಸಂಬಂಧ :**

ಇಲ್ಲಿ ಸಂಬಂಧವನ್ನು ಬಗೆಬಗೆಯಿಂದ ತಿಳಿಯಬೇಕಾಗಿದೆ. ಹೇಗೆಂದರೆ ಕರ್ಮದಿಂದ ಅನಿತ್ಯವಾದ ಫಲವಾಗುವದೆಂದೂ ಜ್ಞಾನ ದಿಂದಲೇ ಪರಮಪುರುಷಾರ್ಥವಾದ ಮುಕ್ತಿಯು ದೊರೆಯುವದೆಂದೂ ಶ್ರುತಿಯು ಹೇಳುತ್ತದೆ. ಆದ್ದರಿಂದ ಕರ್ಮವನ್ನು ಹೇಳುವ ವೇದವಿಚಾರ ವನ್ನು ಮಾಡಿದವರೂ ಮಾಡದೆ ಇದ್ದವರೂ ಇಬ್ಬರೂ, ಬ್ರಹ್ಮವಿಚಾರಕ್ಕೆ ಅಧಿಕಾರವಿದ್ದರೆ ಸಾಕು, ಅವಶ್ಯವಾಗಿ ಅದರ ವಿಚಾರವನ್ನು ಮಾಡಬೇಕು. ವಿಚಾರದಿಂದ ವಸ್ತುವಿನ ಜ್ಞಾನವು ಅವಶ್ಯವಾಗಿ ಉಂಟಾಗಿಯೇ ತೀರುತ್ತದೆ. ಜ್ಞಾನದಿಂದ ನಿತ್ಯಾನಂದಪ್ರಾಪ್ತಿಯು ಆಗಿಯೇ ತೀರುತ್ತದೆ ; ಆದ್ದ ರಿಂದಲೂ ವಿಚಾರಮಾಡಬೇಕು. ಅಂತೂ ಅಧಿಕಾರಿಯಾದವನು ವೇದಾಂತ ವಾಕ್ಯವಿಚಾರವನ್ನು ಮಾಡಬೇಕು ; ವೇದಾಧಿಕಾರವಿಲ್ಲದವನು ಪುರಾಣಾದಿ ಗಳಿಂದಲಾದರೂ ವಿಷಯವನ್ನು ತಿಳಿದುಕೊಂಡು ತತ್ತ್ವವಿಚಾರವನ್ನು ಮಾಡಬೇಕು. ಇದರಿಂದ ಆತ್ಮಜ್ಞಾನವಾಗಿ ಪರಮಪುರುಷಾರ್ಥವು ದೊರಕುತದೆ.

## ೩. ಬ್ರಹ್ಮವೂ ಜಗತ್ತೂ

**ಬ್ರಹ್ಮಕ್ಕೂ ಜಗತ್ತಿಗೂ ಸಂಬಂಧ :**

ಬ್ರಹ್ಮವು ಜಗತ್ತಿಗೆ ಕಾರಣವೆಂದು ಉಪನಿಷತ್ತುಗಳಲ್ಲಿ ಹೇಳಿರು ತ್ತದೆ. ಈ ಜಗತ್ತು ದೇಶಕಾಲನಿಮಿತ್ತಗಳ ಕಟ್ಟುಪಾಡಿಗೆ ಸಿಕ್ಕಿಕೊಂಡಿರುವ ಕ್ರಿಯಾಕಾರಕಫಲಗಳ ರೂಪವಾಗಿರುತ್ತದೆ. ಇದರಲ್ಲಿ ಕ್ರಿಯೆಗಳನ್ನು ಮಾಡಿ ಫಲಗಳನ್ನು ಅನುಭವಿಸುವ ಅನೇಕ ಜೀವರುಗಳು ಇರುತ್ತಾರೆ. ಪ್ರತ್ಯಕ್ಷದಿಂದಾಗಲಿ ಅನುಮಾನದಿಂದಾಗಲಿ ಆಗಮದಿಂದಾಗಲಿ ತಿಳಿಯ ಬರುವ ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾದದ್ದೇ ಬ್ರಹ್ಮವೆಂದು ಶ್ರುತಿಯಲ್ಲಿ ಹೇಳಿರುತ್ತದೆ (೧-೧-೨). ಇಂಥ ಬ್ರಹ್ಮವೇ ನಮ್ಮ ಆತ್ಮನು.

ಕಾಲಾಕಾಶಗಳಿಂದ ಕೂಡಿರುವ ಜಗತ್ತಿಗೂ ಕಾರಣವೆಂದದ್ದರಿಂದ ಬ್ರಹ್ಮವು ಕಾಲ, ಆಕಾಶ- ಇವುಗಳಿಗೂ ಕಾರಣವಾಗಿರುವದೆಂದು ಉಪನಿಷತ್ತಿನ ಅರ್ಥವಾಯಿತು. ಆದರೆ ಹುಟ್ಟುವ ಕಾರ್ಯವೆಲ್ಲವೂ ಆಕಾಶದಲ್ಲಿ ಹುಟ್ಟಬೇಕು, ಒಂದಾನೊಂದು ಕಾಲದಲ್ಲಿ ಹುಟ್ಟಬೇಕು. ಹೀಗಿರುವಲ್ಲಿ ಕಾಲಾಕಾಶಗಳೂ ಹುಟ್ಟುವವೆಂಬುದನ್ನು ಹೇಗೆ ಮನವರಿಕೆಮಾಡಿಕೊಳ್ಳಬೇಕು ?- ಎಂಬ ಶಂಕೆಯುಂಟಾಗುವದು ಸಹಜ. ಆದರೆ ಒಂದರಿಂದೊಂದು ವಿಂಗಡವಾಗಿ ಕಾಣುವದೆಲ್ಲವೂ ಕಾರ್ಯವೇ ಆಗಿರುತ್ತದೆ. ಕಾಲವೂ ಆಕಾಶವೂ ವಿಭಕ್ತವಾಗಿರುವದರಿಂದ ಅವೂ ಕಾರ್ಯವಾಗಿರಬೇಕೆಂಬುದು ಯುಕ್ತವಾಗಿರುತ್ತದೆ (೨-೧-೭). ಆಕಾಶಾದಿಗಳು ಹುಟ್ಟುವದಕ್ಕೂ ಮೊದಲಿನ ಸ್ಥಿತಿಯನ್ನು ಕಲ್ಪಿಸಿಕೊಳ್ಳುವದಾದರೂ ಹೇಗೆ ?- ಎಂದರೆ, ತನಿನಿದ್ರೆಯೇ ಮುಂತಾದ ಸ್ಥಿತಿಗಳಲ್ಲಿ ಕಾಣಬರುವಂತೆ ಅನಾಕಾಶಸ್ಥಿತಿಯನ್ನೂ ಕಲ್ಪಿಸಿಕೊಳ್ಳಬಹುದು. ಆದ್ದರಿಂದ ಬ್ರಹ್ಮವು ಆಕಾಶಾದಿಜಗತ್ತಿಗೆಲ್ಲಕ್ಕೂ ಕಾರಣವಾಗಿದೆ. ಈ ಜಗತ್ತು ಬ್ರಹ್ಮದಿಂದಲೇ ಹುಟ್ಟಿ, ಬ್ರಹ್ಮದಲ್ಲಿಯೇ ಇದ್ದು, ಬ್ರಹ್ಮದಲ್ಲಿಯೇ ಲಯವಾಗುತ್ತದೆ (೧-೧-೨).

ಬ್ರಹ್ಮವು ಜಗತ್ಕಾರಣವೆಂದದ್ದರಿಂದ ಬ್ರಹ್ಮವು ಮೊದಲು ಇದ್ದು, ಆಮೇಲೆ ಜಗತ್ತು ಉಂಟಾಗುವದು- ಎಂದು ತಿಳಿದುಕೊಳ್ಳಬಾರದು. ಏಕೆಂದರೆ ಮೊದಲು, ಆಮೇಲೆ- ಎಂಬಿವು ಕಾಲವಾಚಕಗಳಾದ ಶಬ್ದಗಳು. ಮೇಲೆ ಹೇಳಿರುವಂತೆ ಕಾಲವೂ ಬ್ರಹ್ಮದಿಂದಲೇ ಉಂಟಾಗಿರುವ ಕಾರ್ಯವಾಗಿದೆ. ಆದರೆ ಕಾಲವುಂಟಾಗುವದಕ್ಕಿಂತ ಮೊದಲು ಕಾಲವಿರುವದಿಲ್ಲ. ಹೀಗೆಯೇ ಆಕಾಶವೂ ಬ್ರಹ್ಮದ ಕಾರ್ಯವಾಗಿರುವದರಿಂದ ಬ್ರಹ್ಮವು ಒಂದು ಕಡೆಯಲ್ಲಿದ್ದು ಆಕಾಶವು ಮತ್ತೊಂದು ಕಡೆಯಲ್ಲಿರುತ್ತದೆ ಎಂದು ಕಲ್ಪಿಸಬಾರದು. ಏಕೆಂದರೆ ಕಾರ್ಯವಾದ ಆಕಾಶಕ್ಕಿಂತ ಬೇರೊಂದು ಆಕಾಶವಿರುವದಿಲ. ಆದ್ದರಿಂದ ಬ್ರಹ್ಮವು ದೇಶಕಾಲಗಳಿಂದ ಕಟ್ಟುವಡೆಯದೆ ಇರುವ ತತ್ತ್ವವಾಗಿದೆ. ಕಾಲಾಕಾಶಗಳು ಕಾರ್ಯವೆಂದರೆ ಕಾಲಾಕಾಶಗಳಲಿ ಹುಟ್ಟುವ ಪದಾರ್ಥಗಳೆಂದೇನೂ ಅರ್ಥವಲ್ಲ.

ಬ್ರಹ್ಮಕ್ಕಿಂತ ಅವು ಬೇರೆಯಲ್ಲವೆಂದೇ ಅರ್ಥ. ಇಡಿಯ ಜಗತ್ತೇ ಬ್ರಹ್ಮದ ಕಾರ್ಯವು, ಎಂದರೆ ಬ್ರಹ್ಮಕ್ಕಿಂತ ಬೇರೆಯಾಗಿರುವದಲ್ಲವೆಂದರ್ಥ. (೨-೧-೧೪). ಬ್ರಹ್ಮವನ್ನೇ ನಾವು ಜಗತ್ತೆಂದು ವ್ಯವಹರಿಸುತ್ತಿರುವೆವು (೨-೧-೧೮).

## ಬ್ರಹ್ಮದ ಜಗತ್ಕಾರಣತ್ವದಲ್ಲಿ ಆಕ್ಷೇಪಸಮಾಧಾನಗಳು :

ಬ್ರಹ್ಮವು ಜಗತ್ತಿಗೆ ಕಾರಣವೆಂಬುದು ಯುಕ್ತಿಗೆ ಹೊಂದುತ್ತದೆಯೆ ? ಬ್ರಹ್ಮವು ನಮ್ಮ ಆತ್ಮನೆಂದು ಒಪ್ಪಿದರೆ ನಮ್ಮ ಆತ್ಮನೇ ಜಗತ್ಕಾರಣವೆಂದಂತೆ ಆಗುತ್ತದೆ. ಬ್ರಹ್ಮವು ಚೇತನವಾಗಿರುತ್ತದೆ, ಜಗತ್ತು ಜಡವಾಗಿರುತ್ತದೆ. ಕಾರ್ಯವು ಕಾರಣದಂತೆಯೇ ಇರಬೇಕಲ್ಲದೆ ವಿಲಕ್ಷಣವಾಗಿರಬಾರದು. ಹಾಗಲ್ಲವೆನ್ನುವವರು ಮಣ್ಣಿನಿಂದಲೂ ಚಿನ್ನದ ಒಡವೆಗಳಾಗಬಹುದೆನ್ನ ಬೇಕಾಗುತ್ತದೆ. ಬ್ರಹ್ಮದಲ್ಲಿ ಜಗತ್ತು ಲಯವಾದರೆ ಜಗತ್ತಿನ ದೋಷವು ಬ್ರಹ್ಮಕ್ಕೂ ಅಂಟಬೇಕಾಗುತ್ತದೆ. ಬ್ರಹ್ಮದಲ್ಲಿ ಯಾವ ವಿಭಾಗವೂ ಇಲ್ಲದ್ದರಿಂದ ಮತ್ತೆ ಅದರಿಂದ ವಿಭಕ್ತವಾದ ಜಗತ್ತು ಹುಟ್ಟಬಾರದೆಂದಾ ಗುತ್ತದೆ. ಬ್ರಹ್ಮವೇ ಜಗತ್ತೆಂದಾಗುವದರಿಂದ ಜೀವರಿಗೂ ಅವರು ಅನು ಭವಿಸುವ ವಿಷಯಗಳಿಗೂ ಭೇದವಿಲ್ಲವೆಂದಾಗುತ್ತದೆ. ಆತ್ಮನೇ ಬ್ರಹ್ಮವಾಗಿರುವದರಿಂದ ಅವನು ಬೇಕೆಂತಲೇ ತನಗೆ ಬಂಧಕವಾದ ಜಗತ್ತ ನ್ನುಂಟುಮಾಡಿಕೊಂಡು ಸಂಸಾರದುಃಖವನ್ನು ಅನುಭವಿಸುವನೆಂದೂ ಆಗುತ್ತದೆ. ಯಾವ ಸಾಮಗ್ರಿಯೂ ಇಲ್ಲದೆ ಜಗತ್ತನ್ನು ಬ್ರಹ್ಮವು ಸೃಷ್ಟಿಸುವ ದೆಂಬುದು ಅನುಭವಕ್ಕೆ ವಿರುದ್ಧವಾಗಿರುತ್ತದೆ. ಬ್ರಹ್ಮವೇ ಜಗತ್ತಾಗಿರುವ ದೆಂದು ಹೇಳಿದರೆ ಈಗ ಬ್ರಹ್ಮವೇ ಇಲ್ಲವೆಂದಾಗಬೇಕಾಗುತ್ತದೆ. ಇದೂ ಅಲ್ಲದೆ ಚೇತನರೂಪವಾದ ಆತ್ಮನು ಯಾವದಕ್ಕೂ ಉಪಾದಾನ ಕಾರಣವಲ್ಲ; ಅವನಿಗಿಂತ ಬೇರೆಯಾಗಿರುವ ಜಡವಾದ ಪ್ರಧಾನವೇ ಜಗತ್ತಿಗೆ ಕಾರಣವು ಎಂದು ಸಾಂಖ್ಯರು ಹೇಳುತ್ತಾರೆ. ಪರಮಾಣುಗಳೇ ಜಗತ್ತಿಗೆ ಕಾರಣವು ಎಂದು ವೈಶೇಷಿಕರು ಹೇಳುತ್ತಾರೆ. ಅವರು ಇಬ್ಬರೂ

ತಮ್ಮ ವಾದಕ್ಕೆ ಯುಕ್ತಿಗಳನ್ನು ಜೋಡಿಸಿ ಪ್ರತಿಪಾದಿಸುತ್ತಿದ್ದಾರೆ. ಇನ್ನೂ ಅನೇಕರು ಬೇರೆಬೇರೆಯ ಅಭಿಪ್ರಾಯಗಳುಳ್ಳವರಾಗಿರುತ್ತಾರೆ. ಅವರ ಮತಕ್ಕೆಲ್ಲ ಈ ವಾದವು ವಿರುದ್ಧವಾಗಿರುತ್ತದೆ. ಹೀಗಿರುವಲ್ಲಿ ಬ್ರಹ್ಮವು ಜಗತ್ಕಾರಣವೆಂಬುದನ್ನು ಹೇಗೆ ಒಪ್ಪೋಣ ?- ಎಂಬ ಆಕ್ಷೇಪವು ಹುಟ್ಟಬಹುದು.

ಇದಕ್ಕೆಲ್ಲ ಬಾದರಾಯಣರು ಸಮಾಧಾನವನ್ನು ಹೇಳಿರುತ್ತಾರೆ. ಅವರ ಉತ್ತರದ ಸಾರವೇನೆಂದರೆ : ಕಾರಣಕ್ಕಿಂತ ಕಾರ್ಯವು ವಿಲಕ್ಷಣವಾಗಿರಬಾರದೆಂಬ ನಿಯಮವೇನೂ ಇರುವದಿಲ್ಲ. ಮನುಷ್ಯನ ಶರೀರದಿಂದ ಅದಕ್ಕಿಂತ ವಿಲಕ್ಷಣವಾದ ಕೂದಲು, ಉಗುರು- ಇವೆಲ್ಲ ಹುಟ್ಟುತ್ತವೆ ; ಅಚೇತನವಾದ ಸಗಣಿಯಲ್ಲಿ ಚೇತನವಾದ ಹುಳುಗಳು ಹುಟ್ಟಿಕೊಳ್ಳುತ್ತವೆ. ಹೀಗೆಯೇ ಬ್ರಹ್ಮದಿಂದ ವಿಲಕ್ಷಣವಾದ ಜಗತ್ತು ಉಂಟಾಗಬಹುದಾಗಿದೆ. ಕಾರ್ಯಕಾರಣಗಳಲ್ಲಿ ಯಾವದಾದರೊಂದು ಸಾದೃಶ್ಯವಿರಬೇಕೆಂದಾಗಲಿ ಕಾರಣದ ಯಾವದಾದರೊಂದು ಸ್ವಭಾವವು ಕಾರ್ಯದಲ್ಲಿ ಇರಬೇಕೆಂದಾಗಲಿ ನಿಯಮವನ್ನು ಮಾರ್ಪಡಿಸಿಕೊಳ್ಳೋಣ- ಎಂದರೆ ಆಗ ಬ್ರಹ್ಮದಲ್ಲಿರುವ 'ಇರವು' ಎಂಬ ಧರ್ಮವು ಜಗತ್ತಿನಲ್ಲಿಯೂ ಇದೆಯಲ್ಲ! ಆದ್ದರಿಂದ ನಮ್ಮ ಸಿದ್ಧಾಂತದಲ್ಲಿಯೂ ದೋಷವಿಲ್ಲ- ಎಂದು ಸಮಾಧಾನವನ್ನು ಹೇಳುತ್ತೇವೆ (೨-೧-೬). ಕಾರ್ಯವು ಕಾರಣದಲ್ಲಿ ಲಯವಾದರೆ ಕಾರ್ಯದ ಧರ್ಮವೂ ಕಾರಣದಲ್ಲಿರಬೇಕೆಂಬುದಕ್ಕೆ ದೃಷ್ಟಾಂತವೇ ಇಲ್ಲ. ಮಣ್ಣಿನಲ್ಲಿ ಲಯವಾಗುವ ಮಡಕೆಕುಡಿಕೆಗಳ ಧರ್ಮಗಳು ಮಣ್ಣಿಗೆ ಹತ್ತಿಕೊಳ್ಳುವದಿಲ್ಲ ; ಚಿನ್ನದ ಒಡವೆಗಳು ಚಿನ್ನದಲ್ಲಿ ಲಯವಾದಾಗ ಅವುಗಳ ಧರ್ಮವು ಅದಕ್ಕೆ ಹತ್ತಿಕೊಳ್ಳುವದಿಲ್ಲ. ಇದೂ ಅಲ್ಲದೆ ನಾವು ಕಾರ್ಯವೆಂಬುದು ಕಾರಣಕ್ಕಿಂತ ಬೇರೆಯಲ್ಲವೇ ಅಲ್ಲವೆಂದು ಹೇಳುತ್ತಿದ್ದೇವೆ. ಕಾರಣವೇ ಕಾರ್ಯವೆಂದು ತೋರುತ್ತಿರುವದೆಂಬ ಆಕ್ಷೇಪವಾದರೂ ಹೇಗೆ ತಲೆಯೆತ್ತೀತು ? ಜೀವರೂ ವಿಷಯಗಳೂ

ಒಂದಾಗಬೇಕಾಗುವದಲ್ಲ !- ಎಂದು ಆಕ್ಷೇಪಿಸಿದ್ದು ಸರಿಹೋಗುವದಿಲ್ಲ. ಏಕೆಂದರೆ ಸಮುದ್ರದ ಕಾರ್ಯವಾದ ನೊರೆ, ತೆರೆ- ಮುಂತಾದವುಗಳು ಒಂದು ಮತ್ತೊಂದಾಗುವದು ಕಂಡುಬಂದಿರುವದಿಲ್ಲ. ಇದೂ ಅಲ್ಲದೆ ಕಾರಣವೇ ಕಾರ್ಯರೂಪದಿಂದ ತೋರಿಕೊಳ್ಳುವದೆಂಬ ವಾದದಲ್ಲಿ ಈ ಆಕ್ಷೇಪವು ಎದ್ದುಕೊಳ್ಳುವದಕ್ಕೂ ಕಾರಣವಿರುವದಿಲ್ಲ. ಬ್ರಹ್ಮವೆಂದರೆ ಆತ್ಮನೇ ಆಗಿರುವದರಿಂದ ತನಗೆ ಅಹಿತವಾಗಿರುವದನ್ನೇ ಪರಮಾತ್ಮನು ಸೃಷ್ಟಿಸಿಕೊಂಡಂತೆ ಆಗುವದಲ್ಲ !- ಎಂದು ಆಕ್ಷೇಪಿಸಿದ್ದೂ ಯುಕ್ತವಲ್ಲ. ಏಕೆಂದರೆ ಸಂಸಾರಿಯಾದ ಜೀವನು ಜಗತ್ಕಾರಣವೆಂದೇನೂ ನಾವು ಹೇಳುವದಿಲ್ಲ. ಜನರು ತಮ್ಮ ಆತ್ಮನೆಂದು ತಿಳಿದುಕೊಂಡಿರುವದು ಶರೀರ, ಪ್ರಾಣ, ಅಂತಃಕರಣ- ಇವುಗಳ ಅಳತೆಗೆ ಕಟ್ಟುಬಿದ್ದಿರುವ ಸ್ವರೂಪ. ಇದಕ್ಕೆ ಶಾರೀರ, ಜೀವ, ವಿಜ್ಞಾನಾತ್ಮ- ಎಂಬ ಹೆಸರುಗಳುಂಟಾಗಿರುತ್ತವೆ. ಈ ಉಪಾಧಿಪರಿಚ್ಛಿನ್ನನಾದ ಆತ್ಮನು ಜಗತ್ಕಾರಣನಲ್ಲ. ಬ್ರಹ್ಮವೆಂಬ ನಿಜವಾದ ಆತ್ಮಸ್ವರೂಪವು ಜೀವನಿಗಿಂತ ಬೇರೆಯಾಗಿರುತ್ತದೆ. ಬ್ರಹ್ಮವಿಷಯದಲ್ಲಿ ಶ್ರುತಿಯು ಹೇಳುವದು ಜೀವನಿಗೆ ಹೊಂದುವದಿಲ್ಲವೆಂಬುದಕ್ಕೆ ಅನೇಕ ಯುಕ್ತಿಗಳಿವೆ (೨-೪-೨೦, ೧-೧-೨೧, ೧-೧-೩೧, ೧-೨-೨೦, ೧-೨-೨೨, ೧-೩-೪, ೧-೩-೧೨, ೧-೩-೧೮, ೧-೪-೧೭). ನಮ್ಮ ನಿಜವಾದ ಸ್ವರೂಪವು ಸರ್ವಜ್ಞವಾಗಿದೆ, ಸರ್ವಶಕ್ತಿಗಳುಳ್ಳದ್ದಾಗಿರುತ್ತದೆ. ನಿತ್ಯಶುದ್ಧಬುದ್ಧಮುಕ್ತಸ್ವಭಾವವುಳ್ಳದ್ದಾಗಿದೆ. ಅದರಲ್ಲಿ ಕರ್ತೃತ್ವವೇ ಮುಂತಾದ ಸಂಸಾರಧರ್ಮಗಳಿರುವದಿಲ್ಲ (೨-೧-೨೨, ೩-೪-೮). ಜೀವನನ್ನು ಜಗತ್ಕಾರಣವೆಂದು ಶ್ರುತಿಯಲ್ಲಿ ಹೇಳಿರುವದೂ ಇಲ್ಲ. ಯಾವ ಹೊರಗಿನ ಸಾಮಗ್ರಿಯನ್ನೂ ಬಯಸದೆ ಕಾರಣವು ಕಾರ್ಯರೂಪವನ್ನು ತಳೆದದ್ದು ಎಲ್ಲಿಯಾದರೂ ಉಂಟೆ ?- ಎಂಬ ಆಕ್ಷೇಪಣೆಯು ಸರಿಯಲ್ಲ. ಹಾಲು ಮೊಸರಾಗುವದೂ, ದೇವತೆಗಳೇ ಮುಂತಾದವರು ಸಂಕಲ್ಪ ಮಾತ್ರದಿಂದ ನಾಮರೂಪಗಳನ್ನು ಪಡೆಯುವದೂ ಲೋಕದಲ್ಲಿ ಉಂಟು.

ಬ್ರಹ್ಮವು ಜಗತ್ತಾಗಿಬಿಟ್ಟಿದ್ದಿದ್ದರೆ ಆಮೇಲೆ ಬ್ರಹ್ಮವೇ ಉಳಿದುಕೊಳ್ಳ ಲಾರದಲ್ಲ !- ಎಂಬ ಆಕ್ಷೇಪವು ಶ್ರುತಿವಿರುದ್ಧವಾಗಿರುತ್ತದೆ. ಜಗದ್ರೂಪ ವಾಗಿರುವ ಬ್ರಹ್ಮವು ತನ್ನ ಪೂರ್ಣರೂಪದಲ್ಲಿಯೇ ಇರುವದೆಂದು ಶ್ರುತಿಯಲ್ಲಿ ಹೇಳಿರುತ್ತದೆ. ಹೀಗಿರುವಲ್ಲಿ ಅದಕ್ಕೆ ವಿರುದ್ಧವಾಗಿ ಬ್ರಹ್ಮವು ಜಗತ್ತಾಗಿರುವದರಿಂದ ಬ್ರಹ್ಮರೂಪವು ಇರಬಾರದು ಎಂದು ತರ್ಕಿಸುವದಕ್ಕೆ ಆಗುವದಿಲ್ಲ. ಕಾರ್ಯಕಾರಣಭಾವವು ಪರಮಾರ್ಥವಾಗಿದ್ದರೆ, ಎಂದರೆ ಕಾರಣವು ಕಾರ್ಯವಾಗಿ ನಿಜವಾಗಿಯೇ ಪರಿಣಮಿಸಿಬಿಟ್ಟಿದ್ದರೆ, ಈ ಆಕ್ಷೇಪವು ಹೊಂದಬಹುದಾಗಿತ್ತು. ಆದರೆ ಹೀಗಿಲ್ಲ. ಬ್ರಹ್ಮದಲ್ಲಿ ಅವಿದ್ಯೆಯಿಂದ ನಾಮರೂಪಗಳು ಕಲ್ಪಿತವಾಗಿವೆ. ಆ ನಾಮರೂಪಗಳು ವ್ಯಾಕೃತ, ಅವ್ಯಾಕೃತ- ಎಂಬ ಎರಡು ರೂಪಗಳನ್ನು ಪಡೆಯುತ್ತಿರುವವು. ನಾಮರೂಪಗಳು ಬ್ರಹ್ಮಕ್ಕಿಂತ ಬೇರೆಯೆಂದಾಗಲಿ ಬೇರೆಯಲ್ಲವೆಂದಾಗಲಿ ಹೇಳುವದಕ್ಕೆ ಬರುವಹಾಗಿಲ್ಲ. ಏಕೆಂದರೆ ಬ್ರಹ್ಮವು ಚೇತನವಾಗಿ ಶುದ್ಧವಾಗಿರುತ್ತದೆ, ನಾಮರೂಪಗಳು ಅಚೇತನವಾಗಿ ಅಶುದ್ಧವಾಗಿರುತ್ತವೆ ಯಾದ್ದರಿಂದ ಅವುಗಳನ್ನು ಬೇರೆಯೆನ್ನಬೇಕಾಗುವದು ; ಆದರೆ ಬ್ರಹ್ಮದಲ್ಲಿಯೇ ಅವು ಕಲ್ಪಿತವಾಗಿರುವವೇ ಹೊರತು ಬ್ರಹ್ಮವನ್ನು ಬಿಟ್ಟು ಸ್ವತಂತ್ರವಾಗಿ ಯಾವ ನಾಮರೂಪಗಳೂ ಇರುವದಿಲ್ಲ. ಆದ್ದರಿಂದ ನಾಮ ರೂಪಗಳು ಬ್ರಹ್ಮಕ್ಕಿಂತ ಬೇರೆಯಾಗಿಲ್ಲ. ಈ ನಾಮರೂಪಗಳ ಸಂಬಂಧ ದಿಂದಲೇ ಬ್ರಹ್ಮವು ಜಗತ್ಕಾರಣವೆಂದೂ ಪರಿಣಾಮವಾಗುವದೆಂದೂ ವ್ಯವ ಹಾರವಾಗಿರುತ್ತದೆ. ನಿಜವಾಗಿ ತನ್ನ ರೂಪದಿಂದ ಬ್ರಹ್ಮವು ಯಾವ ಪರಿಣಾಮ ವನ್ನೂ ಪಡೆಯದೆ ಇದ್ದಂತೆಯೇ ಇರುತ್ತದೆ (೨-೧-೨೭). ಜೀವನು ತಾನಿ ರುವಂತೆಯೇ ಇದ್ದು ಕನಸಿನಲ್ಲಿ ಪ್ರಪಂಚವನ್ನು ಸೃಷ್ಟಿಸಿಕೊಳ್ಳುವಂತೆ ಬ್ರಹ್ಮವು ಯಾವ ಮಾರ್ಪಾಡನ್ನೂ ಹೊಂದದೆ ಜಗತ್ತನ್ನು ಸೃಷ್ಟಿಸುತ್ತದೆ ಎಂದು ಹೇಳುವದು ಯುಕ್ತಿಯುಕ್ತವೇ ಆಗಿರುತ್ತದೆ (೨-೧-೨೮). ಆದ್ದ ರಿಂದ ಶ್ರುತಿಸಿದ್ಧವಾದ ಜಗತ್ಕಾರಣವಾದಕ್ಕೆ ಯಾವ ಆಕ್ಷೇಪವೂ ಇರುವದಿಲ್ಲ.

ಸಾಂಖ್ಯರೇ ಮೊದಲಾದವರು ಹೇಳುವ ಯುಕ್ತಿಗೆ ಈ ವಾದವು ವಿರುದ್ಧವಾಗಿದೆ ಎಂಬುದನ್ನು ನಾವೂ ಒಪ್ಪುತ್ತೇವೆ. ಆದರೆ ಅವರ ವಾದಗಳು ಶ್ರುತಿವಿರುದ್ಧವಾಗಿರುತ್ತವೆ, ಯುಕ್ತಿವಿರುದ್ಧವಾಗಿರುತ್ತವೆ. ಇದನ್ನು ಬ್ರಹ್ಮಸೂತ್ರದ ಒಂದನೆಯ ಮತ್ತು ಎರಡನೆಯ ಅಧ್ಯಾಯಗಳಲ್ಲಿ ತೋರಿಸಿಕೊಟ್ಟಿರುತ್ತದೆ. ಆದ್ದರಿಂದ ಬ್ರಹ್ಮವು ಜಗತ್ಕಾರಣವೇ ಸರಿ.

ಬ್ರಹ್ಮವು ಜಗತ್ಕಾರಣವೆಂದು ಹೇಳಿರುವದು ಕಾರ್ಯಕಾರಣಗಳ ಅನನ್ಯತ್ವವನ್ನು- ಎಂದರೆ ಕಾರ್ಯವು ಕಾರಣಕ್ಕಿಂತ ಬೇರೆಯಲ್ಲ ಎಂಬುದನ್ನು- ಅರಿತುಕೊಂಡು ಪರಮಕಾರಣವಾದ ಅದ್ವಿತೀಯಬ್ರಹ್ಮಸ್ವರೂಪವನ್ನು ನಿಶ್ಚಯಿಸುವದಕ್ಕೇ ಹೊರತು ನಿಜವಾಗಿ ಜಗತ್ತು ಹುಟ್ಟಿರುವದೆಂದೇ ತಿಳಿಸುವದಕ್ಕಲ್ಲ. ಶ್ರುತಿಯಲ್ಲಿ ಸೃಷ್ಟಿಯನ್ನು ತಾತ್ಪರ್ಯದಿಂದ ಹೇಳಿಲ್ಲವೆಂದೂ ಅದ್ವಿತೀಯಬ್ರಹ್ಮಸ್ವರೂಪವನ್ನು ನಿರ್ಧರಿಸುವದಕ್ಕೆ ಉಪಾಯವನ್ನು ತಿಳಿಸಿಕೊಡುವದೇ ಶ್ರುತಿಯ ಗುರಿಯೆಂದೂ ಹೇಳುವದಕ್ಕೆ ಸೃಷ್ಟಿಶ್ರುತಿಗೆ ಯಾವ ಫಲವನ್ನೂ ಹೇಳಲಿಲ್ಲವೆಂಬ ಯುಕ್ತಿಯ ಆಧಾರವನ್ನು ಕೊಡಬಹುದಾಗಿದೆ. ಆದಕಾರಣ ಸೃಷ್ಟಿಶ್ರುತಿಗಳಲ್ಲಿ ಏನಾದರೂ ಪೂರ್ವಾಪರವಿರೋಧವು ತೋರಿದರೂ ಬಾಧಕವಿರುವದಿಲ್ಲ (೧-೪-೧೪, ೨-೧-೨೭).

# ೪. ಬ್ರಹ್ಮವೂ ಜೀವನೂ

## ಜೀವನು ಬ್ರಹ್ಮದ ಕಾರ್ಯವಲ್ಲ :

ಹೊರಗಿನ ಪ್ರಪಂಚವು ಹೇಗೆ ಬ್ರಹ್ಮದಿಂದಲೇ ಹುಟ್ಟುವದೋ ಹಾಗೆಯೇ ನಮ್ಮೊಳಗಿನ ಪ್ರಪಂಚವೂ ಹುಟ್ಟುತ್ತದೆ. ಅಂದರೆ ಜೀವನ ಉಪಕರಣಗಳಾಗಿರುವ ಶರೀರ, ಇಂದ್ರಿಯಗಳು, ಪ್ರಾಣ, ಮನಸ್ಸು- ಇವೆಲ್ಲವೂ ಬ್ರಹ್ಮದಿಂದಲೇ ಉಂಟಾಗಿರುತ್ತವೆ (೨-೩-೧೫, ೨-೩-೧೬,

೨-೪-೧, ೨-೪-೮). ಆದರೆ ಜೀವನಿಗೆ ಹುಟ್ಟುಸಾವುಗಳಿಲ್ಲ. 'ಇಂಥವನು ಹುಟ್ಟಿದನು', 'ಇಂಥವನು ಸತ್ತನು'- ಎಂಬ ವ್ಯವಹಾರವು ಉಪಾಧಿಯಾದ ದೇಹವು ಕಾಣಿಸಿಕೊಳ್ಳುವದು, ದೇಹವು ಬಿದ್ದುಹೋಗುವದು- ಇವುಗಳಿಂದಲೇ ; ನಿಜವಾಗಿ ಜೀವನಿಗೆ ಹುಟ್ಟುಸಾವುಗಳಾದದ್ದನ್ನು ಯಾರೂ ಕಂಡಿರುವದಿಲ್ಲ.

ಜೀವನು ಬ್ರಹ್ಮದಿಂದ ಹುಟ್ಟುವ ಕಾರ್ಯವಲ್ಲ. ಹೇಗೆ ಆಕಾಶ, ವಾಯು- ಮುಂತಾದವುಗಳು ಬ್ರಹ್ಮದಿಂದ ಹುಟ್ಟಿ ಬೇರೊಂದು ರೂಪದಿಂದ ಕಾಣಿಸಿಕೊಳ್ಳುವವೋ ಹಾಗೆ ಜೀವನೂ ತತ್ತ್ವಾಂತರರೂಪದಿಂದ ಹುಟ್ಟಿರುವದಿಲ್ಲ. ಬೆಂಕಿಯಿಂದ ಕಿಡಿಗಳು ಸಿಡಿಯುವ ಹಾಗೆ ಜೀವನು ಹುಟ್ಟುವನೆಂದು ಕೆಲವು ಶ್ರುತಿಗಳಲ್ಲಿ ಹೇಳಿರುತ್ತದೆಯಾದರೂ ಆ ಶ್ರುತಿಗಳಿಗೆ ಜೀವನು ನಿಜವಾಗಿ ಹುಟ್ಟಿರುವನೆಂದು ಹೇಳುವದರಲ್ಲಿ ತಾತ್ಪರ್ಯ ಎಲ್ಲ. ಏಕೆಂದರೆ ಜೀವನು ನಿತ್ಯನೆಂದೂ ಜನ್ಮರಹಿತನೆಂದೂ ಶ್ರುತಿಗಳಲ್ಲಿಯೇ ಹೇಳಿರುತ್ತದೆ. ಆಕಾಶ, ಕಾಲ- ಮುಂತಾದವು ಒಂದಕ್ಕಿಂತ ಮತ್ತೊಂದು ವಿಭಕ್ತವಾಗಿರುವಂತೆ ಜೀವರುಗಳೂ ಒಬ್ಬರಿಂದೊಬ್ಬರು ವಿಭಕ್ತರಾಗಿರುವದರಿಂದ ಜೀವನೂ ಕಾರ್ಯವೆಂಬ ಯುಕ್ತಿಯನ್ನು ಒಪ್ಪಬೇಕಲ್ಲವೆ ? ಅಂದರೆ ಹಾಗಲ್ಲ. ಏಕೆಂದರೆ ಜೀವನಿಗೆ ಸ್ವತಃಸಿದ್ಧವಾಗಿ ವಿಭಾಗವಿರುವದಿಲ್ಲ. ಆಕಾಶಕ್ಕೆ ಘಟಾಕಾಶ, ಮಠಾಕಾಶ- ಎಂದು ಉಪಾಧಿಗಳಿಂದ ವಿಭಾಗವು ತೋರುವಂತೆ ಅಂತಃಕರಣವೇ ಮುಂತಾದ ಉಪಾಧಿಗಳಿಂದ ಜೀವನಲ್ಲಿ ವಿಭಾಗವು ತೋರುತ್ತಿರುತ್ತದೆ. ಆದ್ದರಿಂದ ಅವನು ಕಾರ್ಯವೆಂಬುದಕ್ಕೆ ಹೇಳಿದ ಯುಕ್ತಿ ಸರಿಯಲ್ಲ. ಆದ್ದರಿಂದ ಜೀವರು ಕಿಡಿಗಳಂತೆ ಹುಟ್ಟುವರು- ಎಂಬ ಶ್ರುತಿಗೆ ಉಪಾಧಿನಿಮಿತ್ತದಿಂದ ಹುಟ್ಟುವಂತೆ ಕಾಣುವರೆಂದೇ ಅರ್ಥ. ಬೆಂಕಿಯೂ ಕಿಡಿಯೂ ಒಂದೇ ಆಗಿರುವಂತೆ ಬ್ರಹ್ಮಜೀವರುಗಳು ಚೈತನ್ಯಸ್ವರೂಪರಾಗಿರುವರೆಂದು ಆ ಶ್ರುತಿಗೆ ಅರ್ಥವನ್ನು ಕಲ್ಪಿಸಬೇಕು. ಆದ್ದರಿಂದಲೇ 'ಬ್ರಹ್ಮವು ಜಗತ್ತನ್ನು ಸೃಷ್ಟಿಸಿ ಅದರಲ್ಲಿ ತಾನೇ ಹೊಕ್ಕಿತು'- ಎಂದು ಶ್ರುತಿಯಲ್ಲಿ ಹೇಳಿರುತ್ತದೆ.

ಆದ್ದರಿಂದ ಜೀವಸ್ವರೂಪವು ಉಪಾಧಿಯಿಂದ ತೋರುವ ಭಿನ್ನರೂಪವೇ ಹೊರತು ನಿಜವಾಗಿ ಬ್ರಹ್ಮದ ಕಾರ್ಯವಲ್ಲ (೨-೧-೧೭)

## ಜೀವನ ವ್ಯವಹಾರವೆಲ್ಲ ಆಧ್ಯಾಸಿಕ :

ಹೀಗಿರುವದರಿಂದ ಜೀವನು ಹುಟ್ಟುವದು, ಕರ್ಮವನ್ನು ಮಾಡುವದು, ಕರ್ಮಫಲವನ್ನು ಪಡೆಯುವದಕ್ಕೆಂದು ಲಿಂಗಶರೀರದೊಡನೆ ಲೋಕಾಂತರಕ್ಕೂ ಜನ್ಮಾಂತರಕ್ಕೂ ತೆರಳುವದು- ಇವೆಲ್ಲ ಉಪಾಧಿಗಳ ವಶದಿಂದಲೇ ಆಗಿರುತ್ತವೆ (೨-೩-೧೯, ೨-೩-೩೩, ೨-೩-೪೮). ಜೀವನ ಸ್ವರೂಪಕ್ಕೆ ಇವು ತಟ್ಟುವದೇ ಇಲ್ಲ. ಅಂತಃಕರಣವೆಂಬ ಉಪಾಧಿಯು ಪರಮಾರ್ಥವಾಗಿಲ್ಲದಿದ್ದರೂ ಜೀವನಿಗೆ ಅಜ್ಞಾನದಿಂದ ಗಂಟುಬಿದ್ದಿರುತ್ತದೆ. ಅವನು ಅಜ್ಞಾನದಿಂದ ಸಂಸಾರಿಯಾಗಿರುವವರೆಗೂ ಅದರ ಸಂಬಂಧವು ತಪ್ಪಿದ್ದಲ್ಲ. ತನಿನಿದ್ರೆ, ಸಾವು, ಪ್ರಲಯ- ಈ ಅವಸ್ಥೆಗಳಲ್ಲಿ ಕೂಡ ಅದು ಅವ್ಯಕ್ತವಾಗಿದ್ದುಕೊಂಡು ಕಾಲಕ್ರಮದಲ್ಲಿ ಹೊರತೋರಿಕೊಳ್ಳುತ್ತದೆ (೨-೩-೩೦, ೨-೩-೩೧, ೪-೨-೮). ಈ ಅಧ್ಯಾಸದ ಕಾರಣದಿಂದಲೇ ಅವನಿಗೆ ಕರ್ತೃತ್ವಭೋಕ್ತೃತ್ವಗಳೂ ಅಂಟಿಕೊಂಡಿರುತ್ತವೆ. ಆದ್ದರಿಂದಲೇ ಅವನು ಹಿಂದೆ ಮಾಡಿದ ಪುಣ್ಯಪಾಪಗಳನ್ನನುಭವಿಸಿದ ಬಳಿಕವೂ ಉಳಿದ ಕರ್ಮರಾಶಿಯಲ್ಲಿ ಸಾಯುವ ಕಾಲಕ್ಕೆ ಯಾವ ಕರ್ಮವು ಹೊರಚಿಮ್ಮುವದೋ ಅದಕ್ಕೆ ತಕ್ಕಂತೆ ಮುಂದಿನ ಜನ್ಮವನ್ನು (೩-೧-೮, ೩-೧-೧೧) ಪಡೆಯುತ್ತಾನೆ.

ಮೇಲೆ ವರ್ಣಿಸಿರುವ ಲೌಕಿಕವೈದಿಕವ್ಯವಹಾರಗಳೆಲ್ಲವೂ ಉಪಾಧಿಗಳನ್ನೂ ತನ್ನ ಆತ್ಮಸ್ವರೂಪವನ್ನೂ ಏಂಗಡಿಸಿಕೊಳ್ಳದ ಅವಿದ್ಯಾದೃಷ್ಟಿಯಿಂದಲೇ ಆಗಿರುತ್ತವೆ. ಈ ಜೀವನು ಯಾವಾಗ ಈಶ್ವರನ ಧ್ಯಾನದಿಂದ ಆತನ ಅನುಗ್ರಹವನ್ನು ಪಡೆದುಕೊಳ್ಳುವನೋ ಆಗ ದೇಹಾದ್ಯುಪಾಧಿಗಳ ಧರ್ಮವನ್ನು ತನ್ನ ಮೇಲೆ ಹಾಕಿಕೊಳ್ಳುವದನ್ನು ಬಿಟ್ಟು ಪರಮಾರ್ಥವಾದ

ತನ್ನ ಸಚ್ಚಿದಾನಂದಸ್ವರೂಪವನ್ನು ಕಂಡುಕೊಳ್ಳುವನು (೩-೨-೫, ೩-೨-೬).

ಈಶ್ವರನು ಜೀವನಿಗಿಂತ ಬೇರೆ ಎಂಬ ಅರಿವೂ ಅವರಿಬ್ಬರಲ್ಲಿರುವ ಉಪಾಸ್ಯೋಪಾಸಕಭಾವವೂ ಈ ಅಧ್ಯಾಸದೃಷ್ಟಿಯಿಂದಲೇ ಸಾಗಿರುತ್ತದೆ. ಜೀವನಿಗೆ ಶಾಸ್ತ್ರದಲ್ಲಿ ಹೇಳಿರುವ ವಿಧಿನಿಷೇಧಗಳೆಲ್ಲವೂ ಉಪಾಧಿಯ ಅಧ್ಯಾಸವನ್ನಿಟ್ಟುಕೊಂಡೇ ಹೇಳಿದವುಗಳಾಗಿರುತ್ತವೆ (೨-೩-೪೮). ಈ ದೃಷ್ಟಿಯಿಂದ ನೋಡಿದಾಗ ಜೀವನು ಪರಮಾತ್ಮನ ಅಂಶವಾಗಿರುತ್ತಾನೆ (೨-೩-೪೩). ಆದರೆ ಜೀವನಿಗಾಗುವ ಸುಖದುಃಖಭೋಗವು ಅವಿದ್ಯಾಕೃತವಾಗಿರುವದರಿಂದ ಅದು ಪರಮೇಶ್ವರನಿಗೆ ಆಗುವದಿಲ್ಲ. ಜೀವನು ಬ್ರಹ್ಮದ ಪ್ರತಿಬಿಂಬದಂತೆ ಇರುವದರಿಂದಲೂ (೨-೩-೫೦) ಜೀವನಿಗಾಗುವ ದುಃಖವು ಬ್ರಹ್ಮಕ್ಕಿಲ್ಲ, ಮತ್ತು ಜೀವನಲ್ಲಿ ಒಬ್ಬನ ಸುಖದುಃಖಗಳು ಮತ್ತೊಬ್ಬರಿಗೆ ಆಗುವದಿಲ್ಲ.

------

# ೫. ಬ್ರಹ್ಮಾತ್ಮಜ್ಞಾನ

**ಅವಸ್ಥಾತ್ರಯಪರೀಕ್ಷೆ :**

ಜೀವನಿಗೆ ಉಪಾಧಿಧರ್ಮಗಳ ಅಧ್ಯಾಸವನ್ನು ಪರಿಹರಿಸಿಕೊಳ್ಳುವದಕ್ಕೆ ಅವಸ್ಥಾತ್ರಯದ ಪರೀಕ್ಷೆಯು ಸಹಾಯಕವಾಗಿರುತ್ತದೆ. ಇದರಿಂದ ಅವನಿಗೆ ತನ್ನ ನಿಜವಾದ ಸ್ವರೂಪದ ಜ್ಞಾನವಾಗುವದು. ಹೇಗೆಂದರೆ ಎಚ್ಚರದಂತೆ ಕನಸೂ ಒಂದವಸ್ಥೆಯು. ಆ ಅವಸ್ಥೆಯಲ್ಲಿ ಎಚ್ಚರದಲ್ಲಿರುವಂತೆಯೇ ಒಂದು ಪ್ರಪಂಚವೂ ದೇಹಾದ್ಯುಪಾಧಿಗಳೂ ತೋರಿಕೊಂಡರೂ ಅವೆಲ್ಲವೂ ಮಾಯಾಮಯವಾಗಿರುತ್ತವೆ (೩-೨-೩). ಏಕೆಂದರೆ ಅಲ್ಲಿ ಎಚ್ಚರದ ದೇಶಕಾಲನಿಮಿತ್ತಗಳಾಗಲಿ, ಅವು ಎಂದಿಗೂ ಹಾಗೇ ಇರುವವೆಂಬ ನಿಶ್ಚಯವಾಗಲಿ, ಇರುವದಿಲ್ಲ. ಅಲ್ಲಿರುವ ದೇಶಕಾಲ

ನಿಮಿತ್ತಗಳು ಎಚ್ಚರದವುಗಳಲ್ಲ. ಅವು ಬೇರೆಯೇ ಆಗಿದ್ದು ಎಚ್ಚರವಾಗುತ್ತಲೂ **ಅವೆಲ್ಲ ಬರಿಯ ತೋರಿಕೆಯೇ** ಎಂದು ಬಾಧಿತವಾಗಿಬಿಡುತ್ತವೆ. ಎಚ್ಚರದಲ್ಲಿ ಆಗುವ ಕೆಲವು ಫಲಗಳನ್ನು ಸ್ವಪ್ನವು ಸೂಚಿಸುವದೆಂದು ಶಾಸ್ತ್ರಜ್ಞರು ಹೇಳುತ್ತಾರೆ ; ಆದರೂ ಆ ಅವಸ್ಥೆಯಲ್ಲಿ ತೋರಿದ್ದು ನಿಜವಾಗಿತ್ತೆಂದು ಮಾತ್ರ ಯಾರೂ ನಂಬುವದಿಲ್ಲ. ಆದ್ದರಿಂದ ಜೀವನಿಗೆ ಹೊರಗಿನ ಉಪಾಧಿಗಳ ಸಂಬಂಧವು ನಿತ್ಯವಲ್ಲವೆಂದು ನಿಶ್ಚಯವಾಗುತ್ತದೆ.

ಕನಸನ್ನು ಬಿಟ್ಟು ತನಿನಿದ್ರೆಯನ್ನು ಚೆನ್ನಾಗಿ ಆಲೋಚಿಸಿದರೆ ಅಲ್ಲಿ ಜೀವನಿಗೆ ಹೊರಗಿನ ವಿಷಯಗಳ ಅರಿವಾಗಲಿ ದೇಹಾದಿಗಳ ಸಂಬಂಧವಾಗಲಿ ಇರುವದೇ ಇಲ್ಲ. ಆದ್ದರಿಂದ ಬಡಗಿಯಾದವನು ತನ್ನ ಬಾಚಿ, ಉಳಿ- ಮುಂತಾದ ಉಪಕರಣಗಳನ್ನು ಉಪಯೋಗಿಸುವಾಗ ಬಡಗಿಯೆಂಬ ವ್ಯವಹಾರಕ್ಕೆ ತಕ್ಕವನಾಗಿದ್ದರೂ ಅವುಗಳನ್ನುಪಯೋಗಿಸದೆ ಇರುವಾಗ ಎಲ್ಲರಂತೆ ಮನುಷ್ಯಮಾತ್ರನಾಗಿರುವಂತೆ, ಈ ಜೀವನು ಎಚ್ಚರಕನಸುಗಳಲ್ಲಿ ದೇಹೇಂದ್ರಿಯಗಳ ಸಂಬಂಧವುಳ್ಳವನಾಗಿದ್ದಾಗ ದೇಹಿ, ಜೀವ, ವಿಜ್ಞಾನಾತ್ಮ- ಮುಂತಾದ ಹೆಸರುಗಳಿಗೆ ತಕ್ಕವನಾಗಿ ಕರ್ತೃಭೋಕ್ತೃವಾಗಿದ್ದರೂ ಅವುಗಳ ಸಂಪರ್ಕವಿಲ್ಲದ ತನಿನಿದ್ರೆಯಲ್ಲಿ ಕೇವಲ ಆತ್ಮನಾಗಿರುತ್ತಾನೆ. ಬಡಗಿಗೆ ತನ್ನ ಕೆಲಸವನ್ನು ಮಾಡುವಾಗ ಆಯಾಸವುಂಟಾದರೂ ಕೆಲಸವನ್ನು ಬಿಟ್ಟಾಗ ಸುಖವಾಗುವಂತೆ ಜೀವನಿಗೂ ಶರೀರೇಂದ್ರಿಯಮನಸ್ಸುಗಳ ವ್ಯಾಪಾರವುಳ್ಳ ಎಚ್ಚರಕನಸುಗಳಲ್ಲಿ ದುಃಖವುಂಟಾದರೂ ತನಿನಿದ್ರೆಯಲ್ಲಿ ಅವನಿಗೆ ತನ್ನ ಸ್ವರೂಪದ ನಿತ್ಯಾನಂದವೇ ದೊರೆಯುತ್ತದೆ (೨-೩-೪೦) ಎಂದಾಯಿತು. ಈ ಅವಸ್ಥೆಯಲ್ಲಿ ಜೀವನು ಬ್ರಹ್ಮವನ್ನೇ ಸೇರಿರುತ್ತಾನೆಂದು ಶ್ರುತಿಗಳಲ್ಲಿ ಹೇಳಿರುವದೂ ಜೀವನು ನಿಜವಾಗಿ ತನ್ನ ಸ್ವರೂಪದಿಂದ ಬ್ರಹ್ಮವೇ ಆಗಿರುತ್ತಾನೆಂಬುದನ್ನು ತಿಳಿಸುತ್ತದೆ (೩-೨-೭). ಆ ಅವಸ್ಥೆಯಲ್ಲಿ ಜೀವನು ಬ್ರಹ್ಮವನ್ನು ಸೇರಿಕೊಳ್ಳುತ್ತಾನೆಂಬುದು ಒಬ್ಬನು ಯಾವದಾದರೊಂದು ಊರನ್ನು ಸೇರುವಂತೆ ಅಲ್ಲ ; ಏಕೆಂದರೆ ಆ ಅವಸ್ಥೆಯಲ್ಲಿ ಬೇರೆಯಾದ ಮತ್ತೊಬ್ಬ ಆತ್ಮನಿರುವಂತೆಯೂ

ಅವನನ್ನು ನಾವು ಮುಟ್ಟುವಂತೆಯೂ ಅನುಭವವಾಗುವದಿಲ್ಲ. ಆದ್ದರಿಂದ ಎಚ್ಚರಕನಸುಗಳಲ್ಲಿ ಅಂತಃಕರಣವೆಂಬ ಉಪಾಧಿಯಿಂದ ಬಿಡಿಯರಿವು ಉಂಟಾಗುತ್ತಿರುವದರಿಂದಲೇ ತಾನು ಸರ್ವಸಾಕ್ಷಿಯಾದ ಪರಮಾತ್ಮನಿಗಿಂತ ಬೇರೆಯಾಗಿರುವಂತೆ ತೋರುವದೆಂದೂ ತನಿನಿದ್ರೆಯಲ್ಲಿ ಈ ಉಪಾಧಿಯು ಇಲ್ಲವಾಗಲು ಬಿಡಿಯರಿವೂ ಇಲ್ಲವಾಗುವದರಿಂದ ಆ ಸಾಕ್ಷಿಯೊಳಗೇ ಅಡಗಿಕೊಂಡಂತೆ ಆಗುವದೆಂಬ ಅಭಿಪ್ರಾಯದಿಂದಲೇ ಇಲ್ಲಿ ಬ್ರಹ್ಮವನ್ನು ಜೀವನು ಸೇರಿಕೊಳ್ಳುವನೆಂದು ಶ್ರುತಿಯು ಹೇಳುವದೆಂದೂ (೧-೩-೨, ೧-೩-೭, ೩-೨-೩೪) ನಿಶ್ಚಯಿಸಬೇಕು. ಹಿಂದೆ ಹೇಳಿದಂತೆ ಅಜ್ಞಾನದಿಂದ ಎಚ್ಚರದಲ್ಲಿ ಕಾಣುವ ಉಪಾಧಿಯನ್ನೇ ಮುಖ್ಯವಾಗಿಟ್ಟುಕೊಂಡು ನೋಡುವಾಗ ಸುಷುಪ್ತಿ, ಮರಣ, ಪ್ರಲಯ- ಈ ಅವಸ್ಥೆಗಳಲ್ಲಿಯೂ ಉಪಾಧಿಯು ಬೀಜರೂಪವಾಗಿರುವಂತೆ ತೋರಿದರೂ ನಿಷ್ಪಕ್ಷಪಾತವಾದ ಅನುಭವದ ಕಣ್ಣಿನಿಂದ ನೋಡಿದರೆ ತನಿನಿದ್ರೆಯಲ್ಲಿ ಯಾವದೊಂದು ದ್ವಿತೀಯವಸ್ತುವಿನ ಸಂಪರ್ಕವೂ ಆತ್ಮನಿಗೆ ಇರುವದಿಲ್ಲವೆಂದು ಮನದಟ್ಟಾಗುವದಕ್ಕೆ ಅಡ್ಡಿಯಿಲ್ಲ. ಆದ್ದರಿಂದ ಶ್ರುತಿಗಳು ಈ ಅವಸ್ಥೆಯಲ್ಲಾಗುವ ಜೀವಬ್ರಹ್ಮಸಂಬಂಧವು **ಸ್ವರೂಪಸಂಬಂಧವು,** ಎಂದರೆ ತಾನೇತಾನಾಗುವ ಸಂಬಂಧವು, ಎಂದು (೩-೨-೩೫) ಹೇಳುತ್ತವೆ. ಹೀಗಿದ್ದರೂ ಈ ತತ್ತ್ವವನ್ನು ಅರಿತುಕೊಳ್ಳದೆ ಇರುವದರಿಂದ ತಾನು ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಮತ್ತೆ ಎಚ್ಚೆತ್ತೆನೆಂಬ ಭ್ರಾಂತಿಯು ಜೀವನಿಗೆ ಆಗುತ್ತಿರುತ್ತದೆ. ಆ ಭ್ರಾಂತಿಯನ್ನು ತೊಲಗಿಸುವದಕ್ಕೆ ಶ್ರುತಿಯು ಪರಮಾತ್ಮನಿಂದಲೇ ಜೀವರು ಎಚ್ಚರುತ್ತಾರೆಂದು (೩-೨-೮) ಹೇಳುತ್ತಿದೆ.

ಹೀಗೆ ಅವಸ್ಥಾತ್ರಯವನ್ನು ಚೆನ್ನಾಗಿ ನಿರುಕಿಸಿನೋಡಿ ತತ್ತ್ವವನ್ನು ನಿಶ್ಚಯಿಸಿಕೊಳ್ಳುವದರಿಂದ ಜೀವನಿಗೆ ಉಪಾಧಿಧರ್ಮಾಧ್ಯಾಸರೂಪವಾದ ಅವಿದ್ಯೆಯು ತೊಲಗಿ ಜ್ಞಾನವುಂಟಾಗುತ್ತದೆ. ಅದರಿಂದ ನಿತ್ಯವಾದ ಸ್ವರೂಪಾನಂದಪ್ರಾಪ್ತಿ ಎಂಬ ಮುಕ್ತಿಯೂ ಆಗುತ್ತದೆ.

# ೬. ಉಪಾಸನೆ

## ಶಾಸ್ತ್ರದೃಷ್ಟಿ - ಲೌಕಿಕದೃಷ್ಟಿ:

ಇದುವರೆಗೆ ವಿವರಿಸಿರುವ ಬ್ರಹ್ಮಾತ್ಮಸ್ವರೂಪದ ಜ್ಞಾನವಾಗುವದಕ್ಕೆ ಶಾಸ್ತ್ರದೃಷ್ಟಿಯು ಅವಶ್ಯವಾಗಿರುತ್ತದೆ. ಏಕೆಂದರೆ ಬ್ರಹ್ಮದ ಸ್ವರೂಪವನ್ನು ಶಾಸ್ತ್ರದಿಂದಲೇ (೧-೧-೩) ತಿಳಿದುಕೊಳ್ಳಬೇಕಾಗಿರುತ್ತದೆ. ಶಾಸ್ತ್ರವೆಂದರೆ ಪುರುಷಾರ್ಥಕ್ಕೆ ಉಪಾಯವನ್ನು ತಿಳಿಸುವ ವೇದವು. ಈ ವೇದದ ಅರ್ಥವನ್ನು ವಿವರಿಸಿ ಯುಕ್ತ್ಯನುಭವಗಳಿಂದ ಪುಷ್ಟಿಗೊಳಿಸುವ ನ್ಯಾಯ, ಮೀಮಾಂಸೆ- ಮುಂತಾದವುಗಳನ್ನೂ ಶಾಸ್ತ್ರವೆಂದೂ ಉಪಚಾರಕ್ಕೆ ಕರೆಯುತ್ತಾರೆ. ವೇದವು ಕರ್ಮಕಾಂಡವೆಂದೂ, ಜ್ಞಾನಕಾಂಡವೆಂದೂ ಎರಡು ಬಗೆಯಾಗಿರುತ್ತದೆ. ಕರ್ಮಕಾಂಡದಲ್ಲಿ ಲೋಕಾಂತರ ಜನ್ಮಾಂತರಗಳಲ್ಲಿ ಒಳ್ಳೆಯ ಫಲವನ್ನು ಕೊಡುವ ಉತ್ತಮಕರ್ಮಗಳನ್ನು ವಿಧಿಸಿರುತ್ತದೆ; ಕೆಟ್ಟಫಲವನ್ನು ಕೊಡುವ ಕರ್ಮಗಳನ್ನು ನಿಷೇಧಿಸಿರುತ್ತದೆ. ಜ್ಞಾನಕಾಂಡದಲ್ಲಿ ಮುಕ್ತಿಯೆಂಬ ನಿತ್ಯವಾದ ಪರಮಪುರುಷಾರ್ಥವನ್ನು ಕೊಡುವ ಬ್ರಹ್ಮಜ್ಞಾನವನ್ನು ಉಪದೇಶಿಸಿರುತ್ತದೆ. ಹೀಗೆ ಜೀವರಿಗೆ ಅಭ್ಯುದಯ (ಏಳಿಗೆ), ನಿಶ್ಶ್ರೇಯಸ (ಸಂಸಾರದುಃಖದಿಂದ ತೀರ ಬಿಡುಗಡೆಯಾಗುವದು)- ಎಂಬ ಫಲವನ್ನುಂಟುಮಾಡುವ ಉಪಾಯವನ್ನು ತಿಳಿಸಿಕೊಡುವದರಿಂದ ಇದಕ್ಕೆ **ವೇದ**ವೆಂದು ಹೆಸರು. ಈ ಪುರುಷಾರ್ಥಕ್ಕೆ ಸಾಧನವೇನೆಂಬುದು ವೇದದಿಂದಲ್ಲದೆ ಪ್ರತ್ಯಕ್ಷದಿಂದಾಗಲಿ ಅನುಮಾನದಿಂದಾಗಲಿ ತಿಳಿಯುವದಕ್ಕೆ ಆಗುವದಿಲ್ಲ. ಆದ್ದರಿಂದ ಪುರುಷಾರ್ಥವನ್ನು ಬಯಸುವವರು ಶಾಸ್ತ್ರದೃಷ್ಟಿಯನ್ನು ಅವಲಂಬಿಸಿಯೇ ಸಾಧನಮಾಡಬೇಕು.

## ಜ್ಞಾನಧ್ಯಾನಗಳ ಭೇದ:

ಕರ್ಮಕಾಂಡವು ವಿಧಿನಿಷೇಧರೂಪವಾಗಿರುವದರಿಂದ ಜ್ಞಾನಕಾಂಡವೂ ಹಾಗೆಯೇ ಇರಬೇಕೆಂದೂ ಇಲ್ಲಿಯೂ ಜ್ಞಾನವನ್ನು ವಿಧಿಸಿದೆಯೆಂದೂ ಕೆಲವರು ತಿಳಿಯುತ್ತಾರೆ. ಇದು ಸರಿಯಲ್ಲ. ಏಕೆಂದರೆ

ವೇದದಲ್ಲಿ ಜ್ಞಾನವೆಂಬ ಮಾತು ಎರಡರ್ಥದಲ್ಲಿ ಉಪಯುಕ್ತವಾಗಿದೆ. ಶಾಸ್ತ್ರದಲ್ಲಿ ಹೇಳಿರುವಂತೆ ಧ್ಯಾನಮಾಡುವದು, ಎಂದರೆ ಒಂದೇ ಪ್ರತ್ಯಯವನ್ನು ಧಾರೆಯಾಗಿ ಚಿಂತಿಸುವದು, ಒಂದು ಬಗೆಯ ಜ್ಞಾನ. ಇದನ್ನು **ಉಪಾಸನೆ**ಯೆಂದೂ ಕರೆಯುತ್ತಾರೆ, ವಸ್ತುವನ್ನು ನೋಡಿ ಅದನ್ನು ಇದ್ದಂತೆ ಅರಿತುಕೊಳ್ಳುವದು ಮತ್ತೊಂದು ಭಗೆಯ ಜ್ಞಾನ. ಇವೆರಡರಲ್ಲಿ ಉಪಾಸನೆಯ ರೂಪವಾದ ಜ್ಞಾನವು ಸಾಧನರೂಪವಾಗಿರುವದರಿಂದ ಅದು ಮಾಡುವ ಕರ್ತೃವಿನ ಅಧೀನವಾಗಿರುತ್ತದೆ ; ಅವನು ತನ್ನ ಇಚ್ಛೆಯಿಂದ ಅದನ್ನು ಮಾಡುವದಕ್ಕೂ ಬಿಡುವದಕ್ಕೂ ಬರುತ್ತದೆ. ಆದ್ದರಿಂದ ಅದನ್ನು ಶಾಸ್ತ್ರದಲ್ಲಿ ವಿಧಿಸಿರುತ್ತದೆ (೩-೩-೧). ಆದರೆ ಯಾವದು ವಸ್ತುವಿದ್ದಂತೆ ತಿಳಿಯುವ ಜ್ಞಾನವೋ ಅದನ್ನು ಬೇಕಾದರೆ ಅರಿಯುವದು, ಬೇಡವಾದರೆ ಬಿಡುವದು- ಹೀಗೆ ಮಾಡುವದಕ್ಕೆ ಬರುವದಿಲ್ಲ. ಆದ್ದರಿಂದ ಅರಿವನ್ನು ವಿಧಿಸುವದಕ್ಕೆ ಆಗುವದಿಲ್ಲ. ಬ್ರಹ್ಮವು ಪ್ರತ್ಯಕ್ಷಾದಿಗಳಿಂದ ತಿಳಿದುಕೊಳ್ಳುವದಕ್ಕೆ ಆಗಲಾರದ ವಸ್ತು. ಅದನ್ನು ಶಾಸ್ತ್ರದಿಂದಲೇ ಅರಿತುಕೊಳ್ಳಬೇಕು. ಅದರ ಅರಿವಿನಿಂದಲೇ ಮುಕ್ತಿಯಾಗುವದೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಆದ್ದರಿಂದಲೇ ಬ್ರಹ್ಮದ ಸ್ವರೂಪವನ್ನು ತಿಳಿಸುವ ಶ್ರುತಿವಾಕ್ಯಗಳು ಬ್ರಹ್ಮದಲ್ಲಿಯೇ **ಸಮನ್ವಯವಾಗಿರುತ್ತವೆ** (೧-೧-೪), ಎಂದರೆ ಅದರ ಜ್ಞಾನವಾದಮೇಲೆ ಮುಂದೆ ಹೀಗೆ ಮಾಡಬೇಕು- ಎಂಬ ವಿಧಿಯಾಗಲಿ, ಹೀಗೆ ಮಾಡಬಾರದು- ಎಂಬ ನಿಷೇಧವಾಗಲಿ, ಶ್ರುತಿಯಲ್ಲಿ ಕಂಡುಬರುವದಿಲ್ಲ. ಉಪಾಸನಾವಾಕ್ಯಗಳಲ್ಲಿ ವಿಧಿಯಿರುತ್ತದೆ. ಆದರೆ ಉಪಾಸನಾಮಾತ್ರದಿಂದ ಕೂಡಲೇ ಮುಕ್ತಿಯಾಗುವದೆಂದು ಎಲ್ಲಿಯೂ ಹೇಳಿರುವದಿಲ್ಲ.

**ಉಪಾಸ್ಯಬ್ರಹ್ಮ :**

ಬ್ರಹ್ಮವೆಂದರೆ ನಮ್ಮೆಲ್ಲರ ಆತ್ಮನಾಗಿರುವ ಪರಮಾರ್ಥವೆಂದು ಹೇಳಿದ್ದಾಗಿದೆ. ಇದು ತನ್ನ ರೂಪದಲ್ಲಿ ತನಗೆರಡನೆಯದಿಲ್ಲದ್ದಾಗಿದೆಯಾದರೂ

ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಅದು ಕಾರಣವಾಗಿದೆ ಎಂದು ನಾವು ಅದನ್ನು ತಿಳಿದಾಗ ಈ ಕಾರ್ಯವಾದ ಜಗತ್ತಿನ ಗುಣಗಳ ಸಂಬಂಧವನ್ನೂ ಅದಕ್ಕೆ ಕಲ್ಪಿಸಿ ಒಂದು ವಿಶೇಷರೂಪವನ್ನೂ ಅದಕ್ಕೆ ಕೊಡಬೇಕಾಗುತ್ತದೆ. ಜೀವನು ಅಜ್ಞಾನದಿಂದ ದೇಹೇಂದ್ರಿಯಮನಸ್ಸುಗಳೆಂಬ ಉಪಾಧಿಯಿಂದ ತನ್ನನ್ನು ಪರಿಚ್ಛಿನ್ನನೆಂದು ತಿಳಿದುಕೊಳ್ಳುವಾಗ ತನಗಿಂತ ಹೊರಗೆ ಒಂದು ದೊಡ್ಡ ಪ್ರಪಂಚವನ್ನು ಕಾಣುತ್ತಾನಷ್ಟೆ. ಆಗ ಈ ಇಡಿಯ ಜಗತ್ತಿಗೆ ಕಾರಣವಾಗಿರುವ ಪರತತ್ತ್ವವನ್ನೂ ನಾಮರೂಪಗಳ ಉಪಾಧಿಯಿಂದ ಕೂಡಿರುವದನ್ನಾಗಿಯೇ ಮಾಡಿಕೊಂಡು ತನಗಿಂತ ಬೇರೆಯೆಂದೂ ಅದೇ ಈಶ್ವರನೆಂದೂ ಕಲ್ಪಿಸಿಕೊಳ್ಳುತ್ತಾನೆ. ನಿಜವಾಗಿ ಪರಮೇಶ್ವರನು ಎಲ್ಲರ ಆತ್ಮನೂ ಆಗಿರುತ್ತಾನಾದರೂ ಉಪಾಧಿಗಳ ತಾರತಮ್ಯದಿಂದ ಉತ್ಕೃಷ್ಟವಾದ ಉಪಾಧಿಯಲ್ಲಿ ಕಾಣುವ ಚೈತನ್ಯವನ್ನೇ ಈಶ್ವರನೆಂದು ಉಪಾಸನೆಮಾಡಬೇಕೆಂದು ಶ್ರುತಿಯಲ್ಲಿ ವಿಧಿಸಿರುತ್ತದೆ (೧-೧-೧೨).

ಈಶ್ವರನಿಂದಲೇ ಜೀವನಿಗೆ ಕರ್ತೃತ್ವವುಂಟಾಗಿರುತ್ತದೆ, ಎಂದರೆ ಈಶ್ವರನ ಅನುಜ್ಞೆಯಿಂದಲೇ ಇವನು ಸಂಸಾರದಲ್ಲಿ ಕರ್ಮಗಳನ್ನು ಮಾಡಿ ಫಲವನ್ನು ಪಡೆಯುತ್ತಾನೆ (೨-೩-೪೧). ಈಶ್ವರನೇ ಕರ್ಮಫಲವನ್ನು ಕೊಡುತ್ತಾನೆ (೩-೨-೪೮), ಬರಿಯ ಕರ್ಮವು ಫಲವನ್ನು ಕೊಡಲಾರದು. ಆದ್ದರಿಂದ ಆತನ ಧ್ಯಾನದಿಂದಲೇ ಜೀವನಿಗೆ ಬಂಧದಿಂದ ಬಿಡುಗಡೆಯಾಗಬೇಕು (೩-೨-೫).

**ಉಪಾಸನೆಗಳಲ್ಲಿ ಭೇದ :**

ಶ್ರುತಿಯಲ್ಲಿ ವಿಧಿಸಿರುವ ಉಪಾಸನೆಗಳು **ಬ್ರಹ್ಮೋಪಾಸನೆ, ಪ್ರತೀಕೋಪಾಸನೆ-** ಎಂದು ಎರಡು ವಿಧವಾಗಿರುತ್ತವೆ. ಬ್ರಹ್ಮವನ್ನೇ ನೇರಾಗಿ ಉಪಾಸನೆಮಾಡುವದು **ಬ್ರಹ್ಮೋಪಾಸನೆ** ; ಬ್ರಹ್ಮಕ್ಕೆ ಬದಲಾಗಿ ಮತ್ತೆ ಯಾವದಾದರೊಂದನ್ನು ಬ್ರಹ್ಮವೆಂದಾಗಲಿ ಅದಕ್ಕಿಂತ ಹೆಚ್ಚಿನದೆಂದಾಗಲಿ ಉಪಾಸನೆಮಾಡುವದು **ಪ್ರತೀಕೋಪಾಸನೆ.** ಕೆಲವು ಪ್ರತೀಕಗಳು ಕರ್ಮಕ್ಕೆ ಅಂಗವಾಗಿರುತ್ತವೆ. ಇವುಗಳನ್ನು ಕೆಲವು ಉದಾಹರಣೆಗಳಿಂದ

ನೆನಪಿಟ್ಟುಕೊಳ್ಳುವದು ಸುಲಭವಾಗುತ್ತದೆ. ಒಂದಾನೊಂದು ಯಜ್ಞದಲ್ಲಿ ಸಾಮವೇದವನ್ನು ಗಾನಮಾಡುವ ಉದ್ಗಾತೃವು ಈ ಗಾನದಲ್ಲಿ ಬರುವ **ಓಂಕಾರವನ್ನು** ಇಂಥಿಂಥ ಗುಣಗಳಿಂದ ಕೂಡಿದ್ದೆಂದು ಉಪಾಸನೆಮಾಡ ಬೇಕೆಂದು ಹೇಳಿರುತ್ತದೆ. ಈ ಉಪಾಸನೆಗೆ **ಉದ್ಗೀಥೋಪಾಸನೆ** (೩-೩-೯) ಎಂದು ಹೆಸರು. ಈ ಓಂಕಾರವು ಕರ್ಮದಲ್ಲಿ ಅಂಗವಾಗಿರುವ ದರಿಂದ ಇದು **ಕರ್ಮಾಂಗೋಪಾಸನೆ**ಯಾಯಿತು. ಹೀಗೆಯೇ ಯಜ್ಞದಲ್ಲಿ ಮಾಡುವ ಪ್ರಸ್ತಾವವೆಂಬ ಮಂತ್ರಗಾನಕ್ಕೆ ವಿಷಯವಾಗಿರುವ ದೇವತೆಯು ಪ್ರಾಣವೆಂಬ ಹೆಸರಿನ ಆ ಬ್ರಹ್ಮವೇ ಎಂದು ಉಪಾಸನೆಮಾಡಬೇಕೆಂದೂ ಶ್ರುತಿಯಲ್ಲಿ ಹೇಳಿದೆ (೧-೧-೨೩). ಅಲ್ಲಿ ಬ್ರಹ್ಮದ ಉಪಾಸನೆಯು ಕೂಡ ಕರ್ಮದ ಅಂಗವಾಗಿರುವದರಿಂದ ಅದೂ **ಕರ್ಮಾಂಗೋಪಾಸನೆ**ಯೇ. ಮನಸ್ಸನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು, ಆಕಾಶವನ್ನು ಬ್ರಹ್ಮ ವೆಂದು ಉಪಾಸನೆಮಾಡಬೇಕು- ಎಂದುಮುಂತಾಗಿ ಒಂದಾನೊಂದು ತತ್ತ್ವವನ್ನು ಬ್ರಹ್ಮಕ್ಕಿಂತ ಬೇರೆಯೆಂದು ತಿಳಿದಿದ್ದರೂ ಅದನ್ನು ಬ್ರಹ್ಮವೆಂದು ಉಪಾಸನೆಮಾಡಬೇಕೆಂದು ಶ್ರುತಿಯಲ್ಲಿ ಹೇಳಿರುತ್ತದೆ. ಇವುಗಳು **ಪ್ರತೀಕೋಪಾಸನೆಗಳು** (೪-೧-೪). ಈ ಎರಡು ಬಗೆಯ ಉಪಾಸನೆ ಗಳಲ್ಲದೆ ಬ್ರಹ್ಮವನ್ನೇ ನೇರಾಗಿ ಉಪಾಸನೆಮಾಡಬೇಕೆಂದು ಹೇಳಿರುವ ಉಪಾಸನೆಗಳೂ ಇವೆ. ಉದಾಹರಣೆಗೆ ಆದಿತ್ಯನಲ್ಲಿರುವ ಹಿರಣ್ಮಯ ಶರೀರನಾದ ಪುರುಷನೂ ಕಣ್ಣಿನೊಳಗೆ ಇರುವ ಅದೇ ರೂಪದ ಪುರುಷನೂ ಬ್ರಹ್ಮವೇ ಎಂದು ಉಪಾಸನೆಮಾಡಬೇಕು ಎಂದು ಹೇಳಿದೆ ; ಇಲ್ಲಿ ಬ್ರಹ್ಮಕ್ಕೆ ನಿಜವಾಗಿ ರೂಪವಿಲ್ಲದೆ ಇದ್ದರೂ ಭಕ್ತಾನುಗ್ರಹಕ್ಕೆಂದು ಆತನು ಆ ರೂಪವನ್ನು ಧರಿಸುವನು, ಆದ್ದರಿಂದ ಆ ರೂಪದಿಂದ ಧ್ಯಾನ ಮಾಡಬೇಕು ಎಂದು ಬ್ರಹ್ಮದ ಉಪಾಸನೆಯನ್ನೇ ವಿಧಿಸಿರುತ್ತದೆ. ಇನ್ನೊಂದು ಉದಾಹರಣೆ. ''ಇದೆಲ್ಲವೂ ಬ್ರಹ್ಮವೇ, ಇದು ಆ ಬ್ರಹ್ಮ ದಿಂದಲೇ ಹುಟ್ಟಿ ಅದರಲ್ಲಿಯೇ ಜೀವಿಸಿಕೊಂಡಿದ್ದು ಅದರಲ್ಲಿಯೇ ಲಯವಾಗುವದು ; ಆದ್ದರಿಂದ ಶಾಂತನಾಗಿ ಉಪಾಸನೆಮಾಡಬೇಕು. ಈ ಪರಮಾತ್ಮನು ಮನೋಮಯನು, ಪ್ರಾಣಶರೀರನು, ಭಾರೂಪನು,

ಸತ್ಯಸಂಕಲ್ಪನು,........ ಇವನೇ ನನ್ನ ಆತ್ಮನು ಎಂದು ಉಪಾಸನೆ ಮಾಡಬೇಕು'' ಎಂದು ಮುಂತಾಗಿ **ಛಾಂದೋಗ್ಯ**ದಲ್ಲಿ ಒಂದು ಉಪಾಸನೆಯನ್ನು ವಿಧಿಸಿದೆ. ಇಲ್ಲಿಯೂ ಬ್ರಹ್ಮದ ಉಪಾಸನೆಯನ್ನು ನೇರಾಗಿ ವಿಧಿಸಿದೆಯಾದರೂ ಹಿಂದಿನ ಉಪಾಸನೆಯಲ್ಲಿ ಹೇಳಿರುವಂತೆ ಬ್ರಹ್ಮವನ್ನು ಬೇರೆಯಾಗಿ ಉಪಾಸನೆಮಾಡಬೇಕೆಂದು ಹೇಳಿಲ್ಲ; ತನ್ನ ಆತ್ಮನೇ ಎಂದು ಧ್ಯಾನ ಮಾಡಬೇಕೆಂದು ಹೇಳಿದೆ. ಆದ್ದರಿಂದ ಇದನ್ನು **'ಅಹಂಗ್ರಹೋಪಾಸನೆ'** ಎಂದು ಕರೆಯುತ್ತಾರೆ. ಹೀಗೆ ಶ್ರುತಿಯಲ್ಲಿ ಬಗೆಬಗೆಯ ಉಪಾಸನೆಗಳನ್ನು ವಿಧಿಸಿರುತ್ತದೆ.

## ಉಪಾಸನೆಗಳನ್ನು ಮಾಡುವ ಕ್ರಮ :

ಕರ್ಮಾಂಗವಾದ ಉಪಾಸನೆಗಳನ್ನು ಕರ್ಮಕ್ಕೆ ಹೊಂದಿಸಿಕೊಂಡು ಮಾಡಬೇಕು. ಮಿಕ್ಕ ಉಪಾಸನೆಗಳನ್ನು ಎಲ್ಲಿ ಮನಸ್ಸು ಏಕಾಗ್ರವಾದೀತೋ ಅಲ್ಲಿ (೪-೧-೧೧) ಯಾವದಾದರೊಂದು ಆಸನವನ್ನು ಅಳವಡಿಸಿ ಕುಳಿತು ಕೊಂಡು (೪-೧-೭) ಧ್ಯಾನಮಾಡಬೇಕು. ಯಾವದಾದರೊಂದು ಉಪಾಸನೆಯನ್ನು ಆರಿಸಿಕೊಂಡು (೩-೩-೫೯) ಆ ಧ್ಯಾನವನ್ನು ಜೀವಮಾನವೆಲ್ಲ ಸತತವಾಗಿ (೪-೧-೧೨) ನಡೆಸಬೇಕು. ಆಯಾ ಉಪಾಸನೆಯ ಸಂಬಂಧವಾಗಿ ವೇದದಲ್ಲಿ ಎಲ್ಲೆಲ್ಲಿ ಯಾವ ಯಾವ ವಿಷಯಗಳನ್ನು ಹೇಳಿದೆಯೋ ಅವುಗಳೆಲ್ಲವನ್ನೂ ಒಂದುಗೂಡಿಸಿಕೊಂಡು (೩-೩-೩) ಧ್ಯಾನಮಾಡಬೇಕು.

## ಉಪಾಸನೆಗಳಿಗೆ ಫಲ :

ಕರ್ಮಾಂಗೋಪಾಸನೆಗಳಿಗೂ ಪ್ರತೀಕೋಪಾಸನೆಗಳಿಗೂ ಬೇರೆ ಬೇರೆಯ ಫಲಗಳನ್ನು ಶ್ರುತಿಯಲ್ಲಿ ಹೇಳಿರುತ್ತದೆಯಾದ್ದರಿಂದ ಅವುಗಳಿಗೆ ಆಯಾ ಫಲವುಂಟಾಗುತ್ತದೆ. ಆದರೆ ಮಿಕ್ಕ ಬ್ರಹ್ಮೋಪಾಸಕರು **ಅರ್ಚಿರಾದಿ ಮಾರ್ಗ** ಅಥವಾ **ದೇವಯಾನ** ಎಂದು ಪ್ರಸಿದ್ಧವಾದ (೪-೩-೧) ಮಾರ್ಗದಿಂದ ಕ್ರಮಕ್ರಮವಾಗಿ ಹೋಗಿ ಕೊನೆಗೆ **ಬ್ರಹ್ಮಲೋಕ**ವನ್ನು ಪಡೆಯುತ್ತಾರೆ (೪-೩-೭). ಆ ಲೋಕದಲ್ಲಿರುವ ಪರಮೇಶ್ವರನಿಗೆ **ಹಿರಣ್ಯಗರ್ಭ**

ನೆಂದು ಹೆಸರು. ಆ ಬ್ರಹ್ಮಲೋಕವು ಸಾತ್ತ್ವಿಕವಾಗಿರುವದರಿಂದ ಅಲ್ಲಿ ತತ್ತ್ವವಿಚಾರವನ್ನು ಮಾಡಿ ಆ ಲೋಕವು ಪ್ರಲಯವಾಗುವ ಕಾಲಕ್ಕೆ ಬ್ರಹ್ಮಜ್ಞಾನವನ್ನು ಪಡೆದುಕೊಂಡು ಆ ಬ್ರಹ್ಮನೊಡನೆ ಎಲರೂ ಮುಕ್ತಿಯನ್ನು ಪಡೆಯುತ್ತಾರೆ (೪-೩-೧೦). ಹೀಗೆ ಉಪಾಸನೆಯಿಂದ ಲೋಕಾಂತರಕ್ಕೆ ಹೋಗಿ ಕಾಲಾಂತರದಲ್ಲಿ ಜ್ಞಾನದ ಮೂಲಕ ಪಡೆಯುವ ಮುಕ್ತಿಗೆ **ಕ್ರಮಮುಕ್ತಿ** ಎಂದು ಹೆಸರು.

## ಉಪಾಸನೆಗಳಿಗೆ ಅಧಿಕಾರಿಗಳು ಯಾರು ?

ಈ ವಿಚಾರವನ್ನು ಹಿಂದೆ ನಾವು ಬ್ರಹ್ಮಜ್ಞಾನವಿಚಾರವಾಗಿ ಹೇಳಿರುವಂತೆ ನಿರ್ಣಯಿಸಬೇಕು. ಎಂದರೆ ಉಪಾಸನೆಗಳನು ವೇದದಲ್ಲಿ ಹೇಳಿರುವದರಿಂದ ವೇದವನು ಅಧ್ಯಯನಮಾಡುವದಕ್ಕೂ ಅದರಲಿ ಹೇಳಿರುವ ಕರ್ಮಗಳನ್ನು ಮಾಡುವದಕ್ಕೂ ಯಾರು ಅಧಿಕಾರಿಗಳೋ ಆ ದ್ವಿಜರೇ ಉಪಾಸನೆಗೂ ಅಧಿಕಾರಿಗಳು. ಆದರೆ ಬ್ರಹ್ಮವು ಎಲ್ಲರಿಗೂ ಆತ್ಮನಾಗಿರುವದರಿಂದ ಹೇಗೆ ಜ್ಞಾನವು ಎಲ್ಲರಿಗೂ ಉಂಟಾಗಬಹುದೋ ಹಾಗೆ ಪರಮೇಶ್ವರನ ಉಪಾಸನೆಯನ್ನೂ ಎಲ್ಲರೂ ಮಾಡಬಹುದಾಗಿದೆ. ಆದ್ದರಿಂದಲೇ ಇತಿಹಾಸಪುರಾಣಗಳಲ್ಲಿ ಪರಮಾತ್ಮತತ್ತ್ವವಿಚಾರವನ್ನೇ ಅಲ್ಲದೆ ಪರಮೇಶ್ವರನನ್ನು ಭಕ್ತಿಯಿಂದ ಉಪಾಸನೆಮಾಡುವ ಬಗೆಯನ್ನೂ ಹೇಳಿರುತ್ತದೆ. ಆದ್ದರಿಂದ ಪುರಾಣಾದಿಗಳಲ್ಲಿ ಹೇಳಿರುವಂತೆ ಎಲ್ಲರೂ ಪರಮೇಶ್ವರನನ್ನು ಉಪಾಸನೆಮಾಡಬಹುದಾಗಿದೆ. ಆ ಮೂಲಕ ಅವರಿಗೆ ಕ್ರಮಮುಕ್ತಿಯೂ ಜ್ಞಾನದಿಂದ ಸದ್ಯೋಮುಕ್ತಿಯೂ ದೊರಕುತ್ತದೆ.

## ಪರಬ್ರಹ್ಮ, ಅಪರಬ್ರಹ್ಮ :

ಜಗತ್ತೆಂಬ ಕಾರ್ಯದ ಗುಣಗಳಿಂದ ಕೂಡಿದ ಸಗುಣಬ್ರಹ್ಮವನ್ನು **ಕಾರ್ಯಬ್ರಹ್ಮ, ಅಪರಬ್ರಹ್ಮ** - ಎಂದು ಕರೆಯುವರು. ಯಾವ ಉಪಾಧಿಯೂ ಇಲ್ಲದ ಶುದ್ಧಬ್ರಹ್ಮವನ್ನು **ಕಾರಣಬ್ರಹ್ಮ, ಪರಬ್ರಹ್ಮ** ಎಂದು ಕರೆಯುವರು. ಉಪಾಸಕರು ಮೊದಲು ಕಾರ್ಯಬ್ರಹ್ಮವನ್ನೇ ಸೇರಿ ಆ ಬಳಿಕ ಕ್ರಮಮುಕ್ತಿಯನ್ನು ಹೊಂದುವರೆಂದು ಮೇಲೆ ಹೇಳಿರುತದೆ.

ಆದರೆ ತತ್ತ್ವಜ್ಞಾನಿಗಳು ವಿಚಾರದಿಂದ ಇಲ್ಲಿಯೇ ತಮ್ಮ ಆತ್ಮನಾದ ಪರಬ್ರಹ್ಮವನ್ನು ಸೇರುವರು ; ಏಕೆಂದರೆ ಅದನ್ನು ಎಲ್ಲಿಗಾದರೂ ಹೋಗಿ ಮುಟ್ಟಬೇಕಾದದ್ದು ಇರುವದಿಲ್ಲ (೪-೩-೭).

ಹೀಗೆ ಪರಬ್ರಹ್ಮ, ಅಪರಬ್ರಹ್ಮ - ಎಂದು ನಾವು ವಿಭಾಗಮಾಡಿರುವದೂ ಅವಿದ್ಯಾದೃಷ್ಟಿಯಿಂದಲೇ ; ನಿಜವಾಗಿ ಎರಡು ಬ್ರಹ್ಮಗಳಿಲ್ಲ. ಬ್ರಹ್ಮಕ್ಕೆ ಯಾವ ಆಕಾರವಾಗಲಿ ವಿಶೇಷವಾಗಲಿ ನಿಜವಾಗಿ ಇರುವದಿಲ್ಲ. ಉಪಾಧಿಗಳಿಂದ ಕೂಡ ಬ್ರಹ್ಮವು ಸವಿಶೇಷವೆಂದಾಗುವದಿಲ್ಲ ; ಏಕೆಂದರೆ ಉಪಾಧಿಗಳು ಅವಿದ್ಯೆಯಿಂದ ಕಲ್ಪಿತವಾಗಿರುತ್ತವೆಯಾದ್ದರಿಂದ ಪರಮಾರ್ಥವಲ್ಲ. ಶ್ರುತಿಯೂ ಬ್ರಹ್ಮವನ್ನು ಸವಿಶೇಷವೆಂದು ಹೇಳುವದಿಲ್ಲ. ಏಕೆಂದರೆ ಬ್ರಹ್ಮದ ಸ್ವರೂಪವನ್ನು ತಾತ್ಪರ್ಯದಿಂದ ವರ್ಣಿಸಬೇಕಾದ ಸ್ಥಳದಲ್ಲೆಲ್ಲ ಶ್ರುತಿಯು ಬ್ರಹ್ಮವು ನಿರ್ವಿಶೇಷವೆಂದೇ ಹೇಳುತ್ತದೆ (೩-೨-೧೧ ರಿಂದ ೩-೨-೧೪). ಸಾಕಾರವಾಗಿಯೂ ಸಗುಣವಾಗಿಯೂ ವರ್ಣಿಸುವ ವಾಕ್ಯಗಳು ಬ್ರಹ್ಮಸ್ವರೂಪವನ್ನು ಹೇಳುವದಕ್ಕೆ ಬಂದಿರುವದಿಲ್ಲ; ಅಲ್ಲಿ ಉಪಾಸನೆಯನ್ನು ವಿಧಿಸುವದೇ ಶ್ರುತಿಯ ಗುರಿಯಾಗಿರುತ್ತದೆ. ಆದ್ದರಿಂದ ಬ್ರಹ್ಮವು ಚಿನ್ಮಾತ್ರವೇ (೩-೨-೧೬), ಅದರ ವಿಶೇಷರೂಪವು ಸೂರ್ಯನ ಪ್ರತಿಬಿಂಬದಂತೆ ಉಪಾಧಿಯಿಂದ ಆದದ್ದೇ (೩-೨-೧೮) ಎಂದು ನಿಶ್ಚಯಿಸಬೇಕು. ನಿರ್ವಿಶೇಷಬ್ರಹ್ಮವು ಅತೀಂದ್ರಿಯವಾಗಿರುವದರಿಂದ ಇಂದ್ರಿಯಕ್ಕೆ ವಿಷಯವಾಗಲಾರದು (೩-೨-೨೩). ಸಾಧಕರು ಪರಮಾತ್ಮನ ಧ್ಯಾನದಿಂದ ಆತನು ನಿಷ್ಪ್ರಪಂಚನೆಂಬುದನ್ನು ಕಂಡುಕೊಳ್ಳುತ್ತಾರೆ (೩-೨-೨೪). ಧ್ಯಾತೃಧ್ಯೇಯವೆಂಬ ಈ ವಿಭಾಗವು ಕೂಡ ಉಪಾಧಿಯಿಂದಾದದ್ದೇ ಹೊರತು ಪರಮಾರ್ಥವಲ್ಲ (೩-೨-೨೫). ಆದ್ದರಿಂದಲೇ **ಬ್ರಹ್ಮವನ್ನರಿತವನು ಬ್ರಹ್ಮವೇ ಆಗುತ್ತಾನೆ-** ಎಂದು ಶ್ರುತಿಯಲ್ಲಿ ಹೇಳಿರುತ್ತದೆ (೩-೨-೨೬). ಪರಮಾತ್ಮನಿಗಿಂತ ಬೇರೆ ಆತ್ಮನಿಲ್ಲವೆಂದೂ ಹೇಳಿರುತ್ತದೆ (೩-೨-೩೦).

# ೭. ಮುಕ್ತಿಸಾಧನ

## ಮುಕ್ತಿಗೆ ನೇರಾದ ಸಾಧನ :

ಮುಕ್ತಿಯೆಂಬುದು ನಮ್ಮ ಆತ್ಮನಾಗಿರುವ ಬ್ರಹ್ಮದ ಸ್ವರೂಪವೇ ಆಗಿರುವದರಿಂದ ಪರಮಾತ್ಮನು ನಮ್ಮ ಆತ್ಮನೇ ಎಂದು ತಿಳಿಯುವದೇ ಅದಕ್ಕೆ ನೇರಾದ ಸಾಧನವೆಂದು ತಾನೇ ಏರ್ಪಡುತ್ತದೆ. ಪರಮೇಶ್ವರನನ್ನು ನಮಗಿಂತ ಭಿನ್ನನೆಂದು ತಿಳಿಯುವದು ಎಂದಿಗೂ ಮುಖ್ಯದೃಷ್ಟಿಯಿಂದ ವಿದ್ಯೆಯಾಗಲಾರದು. ಆತ್ಮನು ನಮ್ಮ ಆತ್ಮನು ಎಂದೇ ಶ್ರುತಿಗಳು ಹೇಳುತ್ತವೆ ; ಹಾಗೆಯೇ ಜ್ಞಾನಿಗಳು ಉಪಾಸನೆಮಾಡುತ್ತಾರೆ (೧-೧-೩೦). ಇದೇ ನಿಜವಾದ ಶಾಸ್ತ್ರದೃಷ್ಟಿ (೩-೨-೨೦). ಆದ್ದರಿಂದ ವಿದ್ಯೆಯೊಂದೇ ಮುಕ್ತಿಗೆ ನೇರಾದ ಸಾಧನವು (೩-೪-೧ ರಿಂದ ೧೭). ಅದಕ್ಕೆ ಮತ್ತೇತರ ಸಹಾಯವೂ ಬೇಕಿಲ್ಲ. ಇದರಂತೆ ಕ್ರಮಮುಕ್ತಿಗೂ ಉಪಾಸನಾರೂಪವಾದ ವಿದ್ಯೆಯೊಂದೇ ಸಾಕು.

ಜ್ಞಾನಿಗಳು ಕರ್ಮವನ್ನು ಮಾಡುತ್ತಿದ್ದರೆಂದು ಶ್ರುತಿಯಲ್ಲಿ ಹೇಳಿರುವದು ಕಂಡುಬರುತ್ತದೆಯಾದರೂ ಕರ್ಮವನ್ನು ಬಿಟ್ಟು ಸಂನ್ಯಾಸಿಗಳಾದ ಜ್ಞಾನಿಗಳೂ ಇದ್ದರೆಂದೂ ಶ್ರುತಿಯಲ್ಲಿಯೇ ಹೇಳಿರುತ್ತದೆ (೩-೪-೯) ಯಾದ್ದರಿಂದ ಜ್ಞಾನಕ್ಕೆ ಕರ್ಮದ ಗರಜಿಲ್ಲವೆಂದು ಏರ್ಪಡುತ್ತದೆ.

## ಮುಕ್ತಿಗೆ ಪರಂಪರೆಯ ಸಾಧನಗಳು :

ಕರ್ಮಗಳು ಮುಕ್ತಿಗೆ ಯಾವ ಬಗೆಯಿಂದಲೂ ಬೇಡವೇ ಬೇಡವೆಂದು ತಿಳಿಯಬಾರದು. ಜ್ಞಾನವು ಉತ್ಪನ್ನವಾಗುವದಕ್ಕೆ **ಯಜ್ಞ, ದಾನ, ತಪಸ್ಸು-** ಇವೆಲ್ಲವೂ ಬೇಕೆಂದು ಶ್ರುತಿಯಲ್ಲಿದೆ (೩-೪-೨೬). ಸಂನ್ಯಾಸಾಶ್ರಮದಲ್ಲಿ **ಶಮದಮಾದಿಗಳನ್ನೂ** (೩-೪-೨೭) ಅವಶ್ಯವಾಗಿ ಅಭ್ಯಾಸ ಮಾಡಬೇಕು. ಯಜ್ಞಾದಿಗಳು ಜ್ಞಾನೇಚ್ಛೆಯನ್ನುಂಟುಮಾಡುವವು ; ಶಮ, ದಮ, ತಿತಿಕ್ಷೆ, ಉಪರತಿ, ಶ್ರದ್ಧೆ, ಸಮಾಧಾನ - ಈ ಆರೂ ಜ್ಞಾನವನ್ನುಂಟು

ಮಾಡುವವಕ್ಕೆ ತೀರ ಹತ್ತಿರದ ಸಾಧನಗಳಾಗಿರುತ್ತವೆ. ಏಷಣಾತ್ರಯವನ್ನು ಬಿಟ್ಟು ಸಂನ್ಯಾಸಿಗಳಾಗಿ **ಪಾಂಡಿತ್ಯ**ವನ್ನು ನಿಶ್ಶೇಷವಾಗಿಸಿಕೊಳ್ಳಬೇಕು ; ಎಂದರೆ ಆತ್ಮವಿಜ್ಞಾನವನ್ನು ಕೊನೆಮುಟ್ಟಿಸಿಕೊಳ್ಳಬೇಕು ; ಆಮೇಲೆ ಮಕ್ಕಳಂತೆ ಒಳಗಿನ ಭಾವಶುದ್ಧಿಯನ್ನು ಪಡೆದುಕೊಳ್ಳುವದೆಂಬ **ಬಾಲ್ಯ**ವನ್ನು ಸಂಪಾದಿಸಿಕೊಳ್ಳಬೇಕು ; ಆಮೇಲೆ ಆತ್ಮತತ್ತ್ವವನ್ನೇ ಮನನ ಮಾಡುವದೆಂಬ **ಮೌನ**ವನ್ನು ಸಾಧನಮಾಡಬೇಕು. **ಪಾಂಡಿತ್ಯಬಾಲ್ಯಮೌನಗಳು** (೩-೪-೪೭) ಜ್ಞಾನವು ಪಕ್ವವಾಗುವದಕ್ಕೆ ಅವಶ್ಯವಾದ ಸಾಧನಗಳು. ಯಜ್ಞಾದಿಗಳೂ ಶ್ರವಣಾದಿಗಳ ಮೂಲಕವೇ ಸಾಧನವಾಗಿರುವದರಿಂದ **ಶ್ರವಣಮನನನಿದಿಧ್ಯಾಸನ**ಗಳನ್ನು ತತ್ತ್ವವು ತಿಳಿಯುವವರೆಗೂ ಆವೃತ್ತಿ ಮಾಡುತ್ತಿರಬೇಕು (೪-೧-೧, ೪-೧-೨).

ದ್ರವ್ಯವೇ ಮುಂತಾದ ಸೌಕರ್ಯಗಳಿಲ್ಲದೆ ಇರುವ ಕಾರಣದಿಂದ ಯಾವದೊಂದು ಆಶ್ರಮಕ್ಕೂ ಯೋಗ್ಯತೆಯಿಲ್ಲದ ವಿಧುರರೇ ಮುಂತಾದವರಿಗೂ **ಜಪ, ಉಪವಾಸ, ದೇವತಾರಾಧನ**- ಮುಂತಾದವುಗಳಿಂದ ವಿದ್ಯೋತ್ಪತ್ತಿಯಾಗುತ್ತದೆ. ಅಂಥವರಿಗೆ ಜನ್ಮಾಂತರದಲ್ಲಿ ಮಾಡಿದ ಕರ್ಮಗಳೂ ಈಗ ಉಪಕಾರಕವಾಗುತ್ತವೆ (೩-೪-೩೮).

## ೮. ಫಲವಿಚಾರ

ಉಪಾಸನಾರೂಪವಾದ ವಿದ್ಯೆಗೆ **ಕ್ರಮಮುಕ್ತಿಯೂ** ಜ್ಞಾನರೂಪದ ವಿದ್ಯೆಗೆ ಸದ್ಯೋಮುಕ್ತಿಯೂ ಫಲವೆಂದೂ ಆಗಲೇ ಹೇಳಿದ್ದಾಗಿರುತ್ತದೆ. ಈಗ ಎರಡು ವಿದ್ಯೆಗಳ ಫಲವನ್ನೂ ಕುರಿತು ಸಂಗ್ರಹವಾಗಿ ಹೇಳಲಾಗುವದು.

ಜ್ಞಾನಸಾಧನಗಳನ್ನು ಅನುಷ್ಠಾನಮಾಡಿದರೆ ಅವುಗಳ ಫಲವಾದ ವಿದ್ಯೆಯು ಈ ಜನ್ಮದಲ್ಲಿಯೇ ಉಂಟಾಗುವದೆಂಬ ನಿಯಮವಿಲ್ಲ. ಉಪಾಸನೆಗೆ **ಸಾಕ್ಷಾತ್ಕಾರ**ವೆಂಬ ಫಲವಾದರೆ ಅದು ಸಾಧಕನಿಗೆ ದಕ್ಕಿದಂತೆ

ಆಯಿತು. ವಿಚಾರಕ್ಕೆ ಆತ್ಮತತ್ತ್ವವು ನಿಶ್ಚಿತವಾಗಿ ತಿಳಿದುಬಂದರೆ ಫಲವಾದಂತೆ ಆಯಿತು. ಆದರೆ ಯಾವದಾದರೊಂದು ಅಡ್ಡಿಯಿದ್ದರೆ ಜ್ಞಾನವು ದಕ್ಕುವದಿಲ್ಲ (೩-೪-೫೨). ಉಪಾಸನೆಯನ್ನು ಸತತವಾಗಿ ಮಾಡದಿದ್ದರೆ ಅದು ದಕ್ಕಲಾರದು. ಹಾಗೆಯೇ ಶ್ರವಣಾದಿಗಳನ್ನು ಫಲವು ಕಾಣುವವರೆಗೂ ಮಾಡಬೇಕಾದ್ದರಿಂದ ಅವನ್ನು ಕ್ರಮವರಿತು ಮಾಡದಿದ್ದರೆ ಜ್ಞಾನವು ದಕ್ಕಲಾರದು. ಆದ್ದರಿಂದ ಜ್ಞಾನವು ಅಳವಡುವವರೆಗೂ ಸಾಧನವನ್ನು ಮಾಡುತ್ತಲೇ ಇರಬೇಕು (೪-೧-೧). ಫಲವು ಈ ಜನ್ಮದಲ್ಲಲ್ಲದಿದ್ದರೆ ಸಾಧನದ ಸಂಸ್ಕಾರದಿಂದ ಮುಂದಿನ ಜನ್ಮದಲ್ಲಾದರೂ ಉಂಟಾಗುತ್ತದೆ (೩-೪-೫೧).

ಯಾವನಿಗೆ ಬ್ರಹ್ಮಜ್ಞಾನವುಂಟಾಗುದೋ ಅವನಿಗೆ ಹಿಂದೆ ಮಾಡಿದ ಅಥವಾ ಮುಂದೆ ಮಾಡಬಹುದಾದ ಕರ್ಮಗಳು ಫಲವನ್ನು ಕೊಡಲಾರದೆ ಹೋಗುವವು. ಹಿಂದೆ ಮಾಡಿದ ಕರ್ಮವು ನಾಶವಾಗುವದು. ಮುಂದೆ ಮಾಡಬಹುದಾದ್ದರ ಫಲವು ಜ್ಞಾನಿಗೆ ಅಂಟಿಕೊಳ್ಳದೆ ಇರುತ್ತದೆ. ಉಪಾಸನಾರೂಪವಾದ ಜ್ಞಾನದಿಂದ ಕರ್ಮಫಲದ ನಿವೃತ್ತಿಯಾಗುವದೆಂದು ಶ್ರುತಿಯಲ್ಲಿ ಹೇಳಿಯೇ ಇರುತ್ತದೆ. ಶುದ್ಧಬ್ರಹ್ಮದ ಜ್ಞಾನವು ಬಂದರೆ ''ನಾನು ಹಿಂದೆ, ಈಗ, ಮುಂದೆ- ಈ ಮೂರು ಕಾಲಕ್ಕೂ ಅಕರ್ತೃವೇ'' ಎಂಬ ಅರಿವು ಬರುವದರಿಂದ ತಪ್ಪುತಿಳಿವಳಿಕೆಯುಳ್ಳವರಿಗೆ ಮಾತ್ರ ಉಂಟಾಗುವ ಕರ್ಮಫಲವು ಜ್ಞಾನಿಗೆ ಆಗುವದಿಲ್ಲ (೪-೧-೧೩, ೪-೧-೧೪)ವೆಂಬುದು ಯುಕ್ತವಾಗಿದೆ. ಆದ್ದರಿಂದ ಮಿಕ್ಕವರು ಈ ದೇಹವನ್ನು ಬಿಟ್ಟಮೇಲೂ ಸಂಚಿತಕರ್ಮದಿಂದ ಮತ್ತೊಂದು ದೇಹವನ್ನು ಪಡೆಯುವಂತೆ ಜ್ಞಾನಿಯು ಮತ್ತೊಂದು ದೇಹವನ್ನು ಪಡೆಯುವದಿಲ್ಲ. ಅವನಿಗೆ ಮುಕ್ತಿಯು ಅವಶ್ಯವಾಗಿ ಉಂಟಾಗುತ್ತದೆ. ಆದರೆ ಜ್ಞಾನವುಂಟಾದ ಕೂಡಲೇ ಪ್ರಾರಬ್ಧಕರ್ಮವೂ ಮುಗಿದು ದೇಹವನ್ನು ಬಿಡುವನೆಂದು ಹೇಳುವದಕ್ಕೆ ಆಗುವದಿಲ್ಲ. ಪ್ರಾರಬ್ಧಕರ್ಮವು ತನ್ನ ಫಲವನ್ನು ಕೊಟ್ಟಿರುವದರಿಂದ ಆ ಫಲದ ಅನುಭವವು ಮುಗಿದ ಬಳಿಕವೇ

(೪-೧-೧೫) ಜ್ಞಾನಿಯ ದೇಹವು ಅವನನ್ನು ಬಿಟ್ಟಗಲುತ್ತದೆ. ಬ್ರಹ್ಮಜ್ಞಾನಿಗೆ ದೇಹವೂ ಮಿಥ್ಯೆಯೆಂದು ತಿಳಿವಳಿಕೆಯಿರುವದರಿಂದ ಆಗಲೂ ಅವನ ದೃಷ್ಟಿಯಿಂದ ಕರ್ಮವು ನಾಶವಾಗಿಯೇ ಇರುತ್ತದೆ. ಆದರೂ ವ್ಯವಹಾರದೃಷ್ಟಿಯಿಂದ ಪ್ರಾರಬ್ಧಕರ್ಮಫಲದ ಭೋಗವು ಮುಗಿದ ಬಳಿಕ (೪-೨-೧೯) ಮುಕ್ತಿಯಾಗುತ್ತದೆ.

ಜ್ಞಾನಿಯು ಹಿಂದೆ ಮಾಡಿದ್ದ ಪುಣ್ಯವೆಲ್ಲವೂ ನಾಶವಾಗುವದಾದರೂ ಅವನು ಮಾಡಿದ್ದ ನಿತ್ಯಕರ್ಮಗಳು ಮಾತ್ರ ಮುಕ್ತಿರೂಪವಾದ ಫಲಕ್ಕೇ ಕಾರಣವಾಗುತ್ತವೆ (೪-೧-೧೬). ಉಪಾಸನಾರೂಪವಾದ ಜ್ಞಾನವನ್ನು ಸಾಧನಮಾಡುತ್ತಿರುವವನು ಆ ಜ್ಞಾನದ ಜೊತೆಯಲ್ಲಿ ನಿತ್ಯಕರ್ಮಗಳನ್ನೂ ಮಾಡುತ್ತಿರುತ್ತಾನೆ. ಆದರೆ ಅವನಿಗೆ ಆ ಕರ್ಮಗಳಿಂದಾಗಬಹುದಾದ ಬೇರೆಯ ಫಲದಲ್ಲಿ ಆಸೆಯಿರುವದಿಲ್ಲವಾಗಿ ಅವನ ಉಪಾಸನೆಯೂ ಕರ್ಮವೂ ಎರಡೂ ಸೇರಿಕೊಂಡೇ ಮುಕ್ತಿಯನ್ನು ಕೊಡುತ್ತವೆ. ನಿಜವಾಗಿ ಮುಕ್ತಿಯೆಂಬುದು ಏತರ ಕಾರ್ಯವೂ ಅಲ್ಲದಿದ್ದರೂ ಪರಂಪರೆಯಿಂದ ಲೋಕಾಂತರದಲ್ಲಿ ಜ್ಞಾನವುಂಟಾಗಿಯೇ ಮುಕ್ತಿಯು ದೊರೆಯುವದರಿಂದ ಆ ಜ್ಞಾನಕ್ಕೇ ಕಾರಣವಾಗಿರುವ ಉಪಾಸನಾಕರ್ಮಗಳೂ ಮುಕ್ತಿಗೆ ಕಾರಣವೆಂದು ಹೇಳುವದರಲ್ಲಿ ತಪ್ಪಿಲ್ಲ. ಬ್ರಹ್ಮಜ್ಞಾನಿಗೆ ಮಾತ್ರ ಅವನು ಹಿಂದೆ ಮುಮುಕ್ಷುವಾಗಿ ಮಾಡಿದ್ದ ನಿತ್ಯಕರ್ಮಗಳು ಜ್ಞಾನಕ್ಕೇ ಕಾರಣವಾಗಿ ಇಲ್ಲಿಯೇ ಫಲವನ್ನು ಕೊಡುತ್ತವೆ. ಆದ್ದರಿಂದ ಜ್ಞಾನಿಯ ಪಾಪಪುಣ್ಯಗಳು ನಾಶವಾಗುತ್ತವೆ ಎಂದು ಮೇಲೆ ಹೇಳಿದ್ದು ಕಾಮ್ಯಕರ್ಮಗಳ ವಿಷಯವೇ (೪-೧-೧೭) ಎಂದು ತಿಳಿಯಬೇಕು.

ಜ್ಞಾನವುಂಟಾದ ಬಳಿಕ ಮುಕ್ತಿಯು ಅವಶ್ಯವಾಗಿ ಆಗುತ್ತದೆ ಯಾದರೂ ಕೆಲವು **ಮಹಾಪುರುಷರು** ಲೋಕದ ವ್ಯವಸ್ಥೆಗಾಗಿ ಭಗವಂತ ನಿಂದ ನಿಯುಕ್ತರಾಗಿರುತ್ತಾರೆ. ಆದ್ದರಿಂದ ಅವರ ಪ್ರಾರಬ್ಧಕರ್ಮವು ಕ್ಷಯವಾಗುವದಕ್ಕೆ ಕೆಲವು ಕಾಲವು ಬೇಕಾಗುತ್ತದೆ. ಅವರ ದೃಷ್ಟಿಯಿಂದ ಸಮ್ಯಗ್ಜ್ಞಾನದಿಂದ ಕರ್ಮನಾಶವಾಗಿರುವದರಿಂದ ಅವರಿಗೆ ಸಂಸಾರ

ದುಃಖವೇನೂ ಆಗುವದಿಲ್ಲ (೩-೩-೩೨). ವಸಿಷ್ಠ, ಭೃಗು, ಸನತ್ಕುಮಾರ, ದಕ್ಷ, ನಾರದ- ಮುಂತಾದ ಜ್ಞಾನಿಗಳೂ ದೇಹಾಂತರವನ್ನು ಪಡೆದರೆಂದು **ಇತಿಹಾಸಪುರಾಣಗಳಲ್ಲಿರುವ ಕಥೆ**ಯನ್ನು ಹೀಗೆಯೇ ಅರ್ಥಮಾಡಿಕೊಳ್ಳ ಬೇಕು. ಬ್ರಹ್ಮಜ್ಞಾನದ ಫಲವಾದ ಮುಕ್ತಿಯು ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವದರಿಂದ ಈ ಕಥೆಗಳ ಬಲದಿಂದ ಜ್ಞಾನದಿಂದ ಕೂಡಲೆ ಮುಕ್ತಿ ಯುಂಟಾದೀತೋ ಇಲ್ಲವೋ ಎಂದು ಸಂಶಯಪಡುವ ಹಾಗಿಲ್ಲ.

ಸಗುಣವಿದ್ಯೆಯಿಂದ ಮುಕ್ತನಾದವನಿಗೆ ಬ್ರಹ್ಮಲೋಕದಲ್ಲಿ ಮನಸ್ಸೂ, ಇಷ್ಟಬಂದಾಗ ಶರೀರವೂ ಇರುತ್ತವೆ (೪-೪-೮, ೪-೪-೧೩, ೪-೪-೧೪). ಅವನು ಸಂಕಲ್ಪಿಸಿದ ವಸ್ತುಗಳನ್ನು ಕಾಣಬಹುದು (೪-೪-೮). ಬೇಕಾದಷ್ಟು ಶರೀರಗಳನ್ನು ಕಲ್ಪಿಸಿಕೊಂಡು ವಿಹರಿಸ ಬಹುದು (೪-೪-೧೫), ಅವನ ಮೇಲೆ ಮತ್ತೊಬ್ಬರು ಒಡೆಯರಿರುವದಿಲ್ಲ (೪-೪-೯). ಅವನು ಈಶ್ವರನಿಗೆ ಸಮಾನನಾಗಿ ಆನಂದದಿಂದ ವಿಹರಿಸು ತ್ತಾನೆ. (೪-೪-೨೧). ಆದರೂ ಅವನಿಗೆ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುವ ಅಧಿಕಾರವಿರುವದಿಲ್ಲ ; ಅದು ನಿತ್ಯಸಿದ್ಧನಾದ ಪರಮೇಶ್ವರನಿಗೇ ಸೇರಿದ್ದು (೪-೪-೧೭). ಈ ಸಗುಣಮುಕ್ತಿಯು ಗೌಣವಾದದ್ದೇ. ಹಿಂದೆ ಹೇಳಿದಂತೆ ಈ ರೀತಿಯಿಂದ ಮುಕ್ತರಾದವರೆಲ್ಲರಿಗೂ ಕಲ್ಪಾಂತದಲ್ಲಿ ಬ್ರಹ್ಮಜ್ಞಾನವುಂಟಾಗಿಯೇ ನಿಜವಾದ ಮುಕ್ತಿಯುಂಟಾಗುತ್ತದೆ.

ಬ್ರಹ್ಮಜ್ಞಾನದಿಂದ ಮಿಥ್ಯಾಜ್ಞಾನವನ್ನು ತೊಡೆದುಹಾಕಿದವರು ಶರೀರಾಭಿಮಾನವನ್ನು ಬಿಟ್ಟು ತಮ್ಮ ಸ್ವರೂಪವನ್ನೇ ಪಡೆಯುತ್ತಾರೆ. (೧-೩-೧೯ ; ೪-೪-೧), ಅದೇ ನಿಜವಾದ ಮುಕ್ತಿಯು (೪-೪-೨) ; ಅವರು ಪಡೆಯುವ ಬ್ರಹ್ಮಸ್ವರೂಪವು ಅವರ ಆತ್ಮನೇ ಆಗಿರುತ್ತದೆ (೪-೪-೩) ; ಆಗ ಅವರಿಗೂ ಬ್ರಹ್ಮಕ್ಕೂ ಯಾವ ವಿಭಾಗವೂ ಇರುವದಿಲ್ಲ (೪-೪-೪). ಈ ಮುಕ್ತರಾದವರು ಹೀಗೆ ನಿತ್ಯಸಿದ್ಧವಾದ ಚೈತನ್ಯಮಾತ್ರ ಸ್ವರೂಪವನ್ನೇ ಪಡೆಯುವರಾದರೂ ವ್ಯವಹಾರದೃಷ್ಟಿಯಿಂದ ಅವರು

ಪರಮೇಶ್ವರರೇ ಆಗುವರು ಅವರು ಸರ್ವಜ್ಞರೂ ಸರ್ವೇಶ್ವರರೂ ಆಗುವರು - ಎಂದು ಹೇಳಿದರೂ ತಪ್ಪಿಲ್ಲ (೪-೪-೭).

ಸಗುಣೋಪಾಸನೆಯಿಂದ **ಅರ್ಚಿರಾದಿಮಾರ್ಗ**ವಾಗಿ ಬ್ರಹ್ಮಲೋಕಕ್ಕೆ ಹೋಗಿ ಜ್ಞಾನವನ್ನು ಹೊಂದಿ ಮುಕ್ತಿಯನ್ನು ಪಡೆಯಲಿ, ಅಥವಾ ನೇರಾಗಿಯೇ ಮುಕ್ತಿಯನ್ನು ಪಡೆಯಲಿ, ಮುಕ್ತಿಯು ನಿತ್ಯಸಿದ್ಧವಾದ ತಮ್ಮ ಆತ್ಮಸ್ವರೂಪವೇ ಆಗಿರುವದರಿಂದ ಮುಕ್ತರಾದವರು ಮರಳಿ ಸಂಸಾರಕ್ಕೆ ಬರುವಹಾಗೇ ಇರುವದಿಲ್ಲ (೪-೪-೨೨) ; ಅವರು ಎಂದೆಂದಿಗೂ ಮುಕ್ತರೇ.

ಜ್ಞಾನಸಾಧನವು ಎಷ್ಟು ವೀರ್ಯವತ್ತರವಾಗಿರುವದೋ ಅದಕ್ಕೆ ತಕ್ಕಂತೆ ಈ ಜನ್ಮದಲ್ಲಾಗಲಿ ಮುಂದಿನ ಜನ್ಮದಲ್ಲಾಗಲಿ ಫಲವಾಗುವದೆಂದು ಹಿಂದೆ ಹೇಳಿದ್ದಾಗಿರುತ್ತದೆ. ಆದರೆ ಜ್ಞಾನದಿಂದ ಉಂಟಾಗುವ ಮುಕ್ತಿಯಲ್ಲಿ ಯಾವ ತಾರತಮ್ಯವೂ ಇರುವದಿಲ್ಲ. ಸಗುಣಬ್ರಹ್ಮಜ್ಞಾನದಲ್ಲಿ ಎಂದರೆ ಉಪಾಸನೆಗಳಲ್ಲಿ ಬೇರೆಬೇರೆ ಗುಣಗಳ ಚಿಂತನೆಯಿಂದ ಫಲದಲ್ಲಿಯೂ ತಾರತಮ್ಯವುಂಟಾಗಬಹುದು. ಆದರೆ ಜ್ಞಾನವು ಎಲ್ಲಿ ಯಾವಾಗ ಉಂಟಾದರೂ ಅದರ ಫಲವಾದ ಮುಕ್ತಿಯು ಒಂದೇ ಬಗೆಯಾಗಿರುತ್ತದೆ (೩-೪-೫೨). ಏಕೆಂದರೆ ಮುಕ್ತಿಯೆಂಬುದು ನಿತ್ಯಸಿದ್ಧವಾಗಿರುವ ಬ್ರಹ್ಮಾನಂದವೇ ಆಗಿರುತ್ತದೆ. ಬ್ರಹ್ಮವು ಒಂದೇ ರೂಪವಾಗಿರುವದು, ಅದರಲ್ಲಿ ಯಾವ ಹೆಚ್ಚುಕಡಿಮೆಯೂ ಇರುವದು ಸಾಧ್ಯವಿರುವದಿಲ್ಲ. ಆದ್ದರಿಂದ ನಿಜವಾದ ಮುಕ್ತಿಯು ಒಂದೇ ರೂಪವಾಗಿರುತ್ತದೆ.

## ಪರಿಶಿಷ್ಟ -೧
## ಶ್ರೀರಾಮಾನುಜಾಚಾರ್ಯರ ಮತದಂತೆ
# ವೇದಾಂತದರ್ಶನ

### ಅನುಬಂಧ :

ಕರ್ಮವನ್ನು ಹೇಳುವ ವೇದದ ಅರ್ಥವನ್ನು ತಿಳಿದುಕೊಂಡವನಿಗೆ ಕರ್ಮಗಳಿಗೆ ಧರ್ಮಾರ್ಥಕಾಮಗಳೆಂಬ ತ್ರಿವರ್ಗವೇ ಫಲವೆಂದೂ ಬರಿಯ ಕರ್ಮವನ್ನೇ ಮಾಡಿದವರಿಗೆ ಆಗುವ ಆ ಫಲವು ಅಲ್ಪವು, ಅಸ್ಥಿರವು- ಎಂದೂ ತಿಳಿವಳಿಕೆಯುಂಟಾದರೆ ಬ್ರಹ್ಮಜ್ಞಾನಕ್ಕೆ ಅನಂತವೂ ಸ್ಥಿರವೂ ಆದ ಫಲವುಂಟಾಗುವದೆಂಬ ಕಾರಣದಿಂದ ಅವನು ಬ್ರಹ್ಮವಿಚಾರವನ್ನು ಮಾಡುವದಕ್ಕೆ ಹೊರಡುತ್ತಾನೆ. ಆದ್ದರಿಂದ ಕರ್ಮಜ್ಞಾನಾನಂತರದಲ್ಲಿ ಬ್ರಹ್ಮವಿಚಾರವನ್ನು ಮಾಡಬೇಕು (೧-೧-೧).

### ಬ್ರಹ್ಮವೂ ಜಗತ್ತೂ :

ಬ್ರಹ್ಮವು ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾದದ್ದು. ಜಗತ್ತಿಗೆ ನಿಮಿತ್ತವೂ ಉಪಾದಾನವೂ ಆಗಿರುವಧರಿಂದ ಬ್ರಹ್ಮವು ಸರ್ವಜ್ಞವೂ ಸತ್ಯಸಂಕಲ್ಪವುಳ್ಳದ್ದೂ ವಿಚಿತ್ರಶಕ್ತಿಗಳಿಂದ ಕೂಡಿದ್ದೂ ಆಗಿರಬೇಕೆಂದು ತಾನೇ ಸಿದ್ಧವಾಗುತ್ತದೆ (೧-೧-೨). ಬ್ರಹ್ಮವು ಅತ್ಯಂತವಾಗಿ ಅತೀಂದ್ರಿಯವಾಗಿರುವದರಿಂದ ಅದು ಜಗತ್ಕಾರಣವೆಂಬುದನ್ನು ಶಾಸ್ತ್ರದಿಂದಲೇ (೧-೧-೩) ತಿಳಿದುಕೊಳ್ಳಬೇಕು. ಪರಬ್ರಹ್ಮವೇ ಜಗತ್ತಿಗೆ ಉಪಾದಾನವೂ ನಿಮಿತ್ತಕಾರಣವೂ ಆಗಿರುತ್ತದೆ (೧-೪-೨೩). ಚಿದಚಿದ್ರೂಪವಾದ ಜಗತ್ತೆಲ್ಲವೂ ಪ್ರಲಯಕಾಲಕ್ಕೆ ಬ್ರಹ್ಮದಲ್ಲಿ ಒಂದಾಗಿರುತ್ತದೆಯಾದ್ದರಿಂದಲೂ ಬ್ರಹ್ಮವು ಮೊದಲಿನಂತೆ ವಿಂಗಡವಾಗಿ ಚಿದಚಿನ್ಮಿಶ್ರಶರೀರವುಳ್ಳದ್ದಾಗಬೇಕೆಂದು ಸಂಕಲ್ಪಿಸಿ ಜಗದ್ರೂಪದಿಂದ ಪರಿಣಾಮವಾಗುತ್ತದೆಯಾದ್ದರಿಂದಲೂ (೧-೪-೨೭) ಬ್ರಹ್ಮವೇ ಉಪಾದಾನವೆಂದು ಹೇಳಬೇಕು. ಪ್ರಲಯದಲ್ಲಿ ಜಗತ್ತು ಪರಮಾತ್ಮನೊಡನೆ ಒಂದಾಗಿದ್ದರೂ ಅದು ಅತಿ ಸೂಕ್ಷ್ಮವಾಗಿ ಕರ್ಮಸಂಸ್ಕಾರಗಳೊಡನೆ ಬೇರೆ ಇದ್ದುಕೊಂಡೇ ಇರುತ್ತದೆ (೨-೧-೩೫). ಆದರೆ ಆಗ ನಾಮರೂಪಗಳು ವಿಂಗಡವಾಗಿರುವದಿಲ್ಲ. ಅಷ್ಟೆ. ಚಿದಚಿದ್ರೂಪಗಳೆರಡೂ ಬ್ರಹ್ಮದ ಅಂಶಗಳೇ ಆಗಿರುತ್ತವೆ (೨-೩-೪೨, ೩-೨-೨೮). ಸೂಕ್ಷ್ಮಚಿದಚಿದ್ವಿಶಿಷ್ಟವಾದ ಬ್ರಹ್ಮವು

ಕಾರಣ ; ಸ್ಥೂಲಚಿದಚಿದ್ವಿಶಿಷ್ಟಬ್ರಹ್ಮವು ಜಗತ್ತೆಂಬ ಹೆಸರಿನಿಂದ ಕಾರ್ಯವಾಗಿರುತ್ತದೆ. ಆದ್ದರಿಂದ ಜಡವಾಗಲಿ ಚೇತನವಾಗಲಿ ಬ್ರಹ್ಮಸ್ವರೂಪದೊಡನೆ ನಿಜವಾಗಿ ಎಂದಿಗೂ ಸ್ವಭಾವದಿಂದ ಒಂದಾಗಲಾರದು (೨-೧-೨೩)

## ಬ್ರಹ್ಮವೂ ಜೀವನೂ

**ಚಿದ್ರೂಪ**ನಾದ ಜೀವನೂ ಅಚಿದ್ದ್ರವ್ಯದಂತೆ ಪರಮಾತ್ಮನ ಶರೀರವೇ ಆಗಿರುತ್ತಾನೆ ; ಚಿದಚಿತ್ತುಗಳೆರಡೂ ಒಂದರಿಂದೊಂದವಸ್ಥೆಗೆ ಬರುವದೆಂಬ ಕಾರ್ಯವೇ ಆಗಿರುತ್ತವೆ. ಆದರೂ ಜೀವನಿಗೆ ಧರ್ಮವಾಗಿರುವ ಜ್ಞಾನಕ್ಕೆ ಮಾತ್ರ ಸಂಕೋಚವಾಗಿದ್ದದ್ದು ವಿಕಾಸವಾಗುತ್ತದೆಯೆಂಬ ರೂಪದ ಕಾರ್ಯತ್ವವುಂಟು ; ಆಕಾಶಾದಿಗಳು ತಮ್ಮ ಸ್ವರೂಪವನ್ನೇ ಮಾರ್ಪಡಿಸಿ ಕಾರ್ಯವೆನಿಸುತ್ತವೆ. ಆದ್ದರಿಂದ ಜೀವನಿಗೆ ಆಕಾಶಾದಿಗಳಂತೆ ಬ್ರಹ್ಮದಿಂದ ಉತ್ಪತ್ತಿಯಿಲ್ಲ (೨-೩-೧೮). ಕಾರಣಾವಸ್ಥೆಯಲ್ಲಿದ್ದ ಜಡವಸ್ತು ಸ್ವರೂಪವನ್ನು ಮಾರ್ಪಡಿಸಿಕೊಂಡು ಭೋಗ್ಯವಾಗುತ್ತದೆ ; ಚಿದ್ವಸ್ತು ಜ್ಞಾನವಿಕಾಸವನ್ನು ಪಡೆದು ಭೋಕ್ತೃವಾಗುತ್ತದೆ ; ಇವೆರಡಕ್ಕೂ ನಿಯಾಮಕವಾದ ಬ್ರಹ್ಮದಲ್ಲಿ ಆ ಅವಸ್ಥಾಂತರವನ್ನು ಹೊಂದಿದ ಚಿದಚಿದ್ವಿಶಿಷ್ಟತ್ವವೆಂಬ ವಿಕಾರವಾಗುತ್ತದೆ. ಆದರೆ ಚಿತ್ತಿನಲ್ಲಿರುವ ಅಪುರುಷಾರ್ಥಗಳಾಗಲಿ ಅಚಿತ್ತಿನಲ್ಲಿರುವ ವಿಕಾರಗಳಾಗಲಿ ಎಂದಿಗೂ ಬ್ರಹ್ಮಸ್ವರೂಪದಲ್ಲಿ ಉಂಟಾಗುವದೇ ಇಲ್ಲ.

ಜೀವನಿಗೆ **ಜ್ಞಾನವೇ** ಮುಖ್ಯವಾದ ಗುಣವು (೨-೩-೨೯). ಆದರೆ ಅವನು ಅಣುವಾಗಿರುವದರಿಂದ ಅವನಿಗೆ ಯಾವಾಗಲೂ ಎಲ್ಲೆಲ್ಲಿಯೂ ಅರಿವಾಗುವದಿಲ್ಲ (೨-೩-೨೦ ರಿಂದ ೨೭). ಜೀವನ ಸ್ವರೂಪಜ್ಞಾನಕ್ಕಿಂತಲೂ ಗುಣರೂಪವಾದ ಜ್ಞಾನವು ಬೇರೆ (೨-೩-೨೮). ಆ ಜ್ಞಾನವು ದೇಹದಲ್ಲೆಲ್ಲ ವ್ಯಾಪಿಸಿಕೊಂಡಿರುತ್ತದೆ (೨-೩-೨೬). ಸುಷುಪ್ತ್ಯಾದಿಗಳಲ್ಲಿಯೂ ಇದ್ದುಕೊಂಡು (೨-೩-೩೧) ಎಚ್ಚರದಲ್ಲಿ ಹೊರತೋರಿಕೊಳ್ಳುತ್ತದೆ.

ಜೀವನು ನಿಜವಾಗಿ ಕರ್ತನು (೨-೩-೩೩). ಆದರೆ ಅವನು ಬಡಗಿಯಂತೆ ಇಚ್ಛೆ ಬಂದಾಗ ಕರ್ಮವನ್ನು ಮಾಡುತ್ತಾನೆ, ಇಲ್ಲದಾಗ ಇಲ್ಲ (೨-೩-೩೯). ಜೀವನು ಮಾಡುವ ಕರ್ಮಗಳಿಗೆ ಪರಮೇಶ್ವರನ ಅನುಮತಿ ಬೇಕು (೨-೩-೪೦, ೨-೩-೪೧).

ಜೀವನು ಪರಮಾತ್ಮನ ಅಂಶವಾಗಿರುತ್ತಾನೆ (೨-೩-೪೨) ; ಆದ್ದರಿಂದಲೇ ಶ್ರುತಿಗಳಲ್ಲಿ ಪರಮಾತ್ಮನು ನಿಯಾಮಕನೆಂದೂ ಜೀವನು ನಿಯಾಮ್ಯ

ನೆಂದೂ ಭೇದವನ್ನು ಹೇಳಿರುವದೇ ಅಲ್ಲದೆ 'ಅದೇ ನೀನು' ಎಂದು ಅವರಿಬ್ಬರಿಗೂ ಏಕತ್ವವನ್ನೂ ಹೇಳಿರುತ್ತದೆ. ಪರಮಾತ್ಮನು ವಿಶಿಷ್ಟನಾಗಿರುವದರಿಂದಲೂ ಜೀವನು ವಿಶೇಷಣವಾಗಿರುವದರಿಂದಲೂ ಸೂರ್ಯನಿಗೆ ಬೆಳಕು ಅಂಶವಾಗಿರುವಂತೆಯೂ ಗೋವಿಗೆ ಗೋತ್ವವು ಅಂಶವಾಗಿರುವಂತೆಯೂ ಬಿಳಿಯ ವಸ್ತುವಿಗೆ ಬಿಳುಪು ಅಂಶವಾಗಿರುವಂತೆಯೂ ದೇಹಿಗೆ ದೇಹವು ಅಂಶವಾಗಿರುವಂತೆಯೂ (೨-೩-೪೫) ಜೀವನು ಪರಮಾತ್ಮನಿಗೆ ಅಂಶನಾಗಿರುತ್ತಾನೆಂಬುದು ಯುಕ್ತ. ಎಲ್ಲರೂ ಬ್ರಹ್ಮದ ಅಂಶವೇ ಆದರೂ ಆಯಾ ದೇಹದ ಸಂಬಂಧದಿಂದ ಅವರವರ ಕರ್ಮಗಳು ಭಿನ್ನವಾಗಿರುತ್ತವೆ (೨-೩-೪೭).

ಜೀವನಿಗೆ ಕರ್ಮವಶದಿಂದ **ಲೋಕಾಂತರ**ಗಳಲ್ಲಿಯೂ ಜನ್ಮಾಂತರಗಳಲ್ಲಿಯೂ ತೊಳಲುವಿಕೆಯಿರುತ್ತದೆ (೩-೧-೧ ರಿಂದ ೩-೧-೨೭). ಆದ್ದರಿಂದ ಅವನು **ದುಃಖಿ**ಯಾಗಿರುತ್ತಾನೆ. ಅವನಿಗೆ **ಅವಸ್ಥಾತ್ರಯ**ಗಳನ್ನು ಹೊಂದುವದೆಂಬ ದೋಷವೂ ಇರುತ್ತದೆ. ಅನಾದಿ**ಕರ್ಮ**ಪರಂಪರೆಯಿಂದ ಅವನು ಮಾಡಿರುವ ಅಪರಾಧನಿಮಿತ್ತದಿಂದ ಪರಮೇಶ್ವರನು ಅವನ ಕಲ್ಯಾಣ ಸ್ವರೂಪವನ್ನು ಮರೆಮಾಡಿರುತ್ತಾನೆ ಆ ಪರಮೇಶ್ವರನ ಸಂಕಲ್ಪದಿಂದಲೇ (೩-೨-೪) ಇವನಿಗೆ **ಬಂಧಮೋಕ್ಷ**ಗಳುಂಟಾಗುತ್ತವೆ. ಆ ಸ್ವರೂಪವು ಮರೆಯಾಗಿರುವದೆಂಬುದು ಜಡವಸ್ತುವಿನ ಸಂಯೋಗದಿಂದ ಆಗಿರುತ್ತದೆ ; ಸೃಷ್ಟಿಕಾಲದಲ್ಲಿ ದೇಹದಿಂದಲೂ ಪ್ರಲಯಕಾಲದಲ್ಲಿ ಸೂಕ್ಷ್ಮ ರೂಪವಾದ ಅಚಿದ್ವಸ್ತುವಿನಿಂದಲೂ ಕೂಡಿಕೊಂಡಿರುವದರಿಂದ (೩-೨-೫) ಅವನಿಗೆ ಜಡವಸ್ತುವಿನ ಸಂಯೋಗವು ಯಾವಾಗಲೂ ಇದ್ದೇ ಇರುತ್ತದೆ. ಕನಸಿನಲ್ಲಿ ಅಲ್ಪವಾಗಿರುವ ಅಸಾಧಾರಣವಾದ ಸುಖದುಃಖಭೋಗವೂ ಸುಷುಪ್ತಿಯಲ್ಲಿ ಜ್ಞಾನವಾಗಲಿ ಭೋಗಾದಿಗಳಾಗಲಿ ಇಲ್ಲದೆ ಪರಮಾತ್ಮನಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು ಮತ್ತೆ ಏಳುವದೂ (೩-೨-೯) ಈ ಕಾರಣದಿಂದಲೇ.

**ಉಪಾಸ್ಯವಾದ ಬ್ರಹ್ಮಸ್ವರೂಪ :**

ಬ್ರಹ್ಮವನ್ನು ಉಪಾಸನಾರೂಪವಾದ ಜ್ಞಾನದಿಂದ ಪಡೆದುಕೊಳ್ಳುವದೇ ಮುಕ್ತಿಯು. ಈ ಪ್ರಾಪ್ಯವಾದ ಬ್ರಹ್ಮವು ಯಾವ ದೋಷವೂ ಇಲ್ಲದೆ ಎಲ್ಲಾ **ಕಲ್ಯಾಣಗುಣ**ಗಳಿಂದಲೂ ಕೂಡಿರುತ್ತದೆ (೩-೨-೧೧). ದೇವತಾದಿ ಸಕಲ**ಶರೀರ**ಗಳಲ್ಲಿದ್ದರೂ ಅದಕ್ಕೆ ಆ ಶರೀರಗಳ ದೋಷವಿಲ್ಲ (೩-೨-೧೪).

ಆದ್ದರಿಂದಲೇ ನೀರಿನಲ್ಲಿರುವ ಸೂರ್ಯ**ಪ್ರತಿಬಿಂಬದಂತೆ** ಪರಮಾತ್ಮನು ನಿರ್ದೋಷನಾಗಿರುತ್ತಾನೆ (೩-೨-೧೮) ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಬ್ರಹ್ಮವನ್ನು **'ನೇತಿ ನೇತಿ'** ಎಂಬ ವಾಕ್ಯವು ನಿರ್ಗುಣನೆಂದು ಹೇಳುವದಿಲ್ಲ ; ಬ್ರಹ್ಮವು ಇಷ್ಟೇ ಅಲ್ಲ ಎಂದು ಹೇಳುತ್ತದೆ (೩-೨-೨೧). ಜೀವರುಗಳಿಗೆ ಆಕಾಶಾದಿಗಳಂತೆ ಮಾರ್ಪಾಡಿಲ್ಲದ್ದರಿಂದ ಅವರು ಸತ್ಯರೂಪರು ; ಆದರೆ ಜೀವರಂತೆ ಜ್ಞಾನಸಂಕೋಚವಿಕಾಸಗಳು ಕೂಡ ಇಲ್ಲದ್ದರಿಂದ ಪರಮಾತ್ಮನು **ಸತ್ಯಕ್ಕಿಂತಲೂ ಸತ್ಯನು,** ಎಂದರೆ ಜೀವರಿಗಿಂತಲೂ ಸತ್ಯನು- ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಶಾಸ್ತ್ರವು ಆತನನ್ನು ಉಪಾಸನೆಮಾಡಬೇಕೆಂದು ಹೇಳುವದರಿಂದ ಆತನಲ್ಲಿ ಅನಂತಕಲ್ಯಾಣಗುಣಗಳಿರುವದೆಂಬುದೇ ಯುಕ್ತ (೩-೨-೨೩, ೩-೨-೨೫). ಬ್ರಹ್ಮವೇ **ಚಿದಚಿದ್ರೂಪ**ಗಳಾಗುವದಿಲ್ಲ ; ಬ್ರಹ್ಮಕ್ಕೂ ಅವುಗಳಿಗೂ ಬ್ರಹ್ಮತ್ವವೆಂಬ ಜಾತಿಯ ಸಂಬಂಧವಿರುವದೂ ಇಲ್ಲ. ಚಿದಚಿತ್ತುಗಳೆರಡೂ ಬ್ರಹ್ಮದ ಅಂಶಗಳೇ ಆಗಿರುತ್ತವೆ (೩-೨-೨೮) ; ಆದ್ದರಿಂದ ಅವುಗಳಲ್ಲಿ ಕಾಣಬರುವ ದೋಷವು ಬ್ರಹ್ಮಕ್ಕೆ ಅಂಟುವಹಾಗಿರುವದಿಲ್ಲ. ಈ ಪರಮ ಪುರುಷನೇ ಉಪಾಸಕರಿಗೆ ಫಲವನ್ನು ಕೊಡುತ್ತಾನೆ (೩-೨-೩೭) ; ಬರಿಯ ಕರ್ಮವೇ ಕೊಡಲಾರದು.

## ಉಪಾಸನೆಯೂ ಕರ್ಮವೂ :

ಉಪಾಸನೆಯಿಂದಲೇ ಪುರುಷಾರ್ಥವಾದ ಮುಕ್ತಿಯು (೩-೪-೧) ದೊರಕುತ್ತದೆ. ಬ್ರಹ್ಮಜ್ಞಾನಿಗಳು ಫಲಾಭಿಸಂಧಿಯಿಲ್ಲದೆ **ಯಜ್ಞಾದಿಕರ್ಮ**ಗಳನ್ನು ಮಾಡುತ್ತಾರೆ ; ಸಕಾಮವಾದ ಯಜ್ಞಾದಿಗಳು ವಿದ್ಯೆಗೆ ವಿರುದ್ಧವಾಗಿರುವದರಿಂದ (೩-೪-೯) ಅವನ್ನು ಮಾಡುವದಿಲ್ಲ. **ಸಂನ್ಯಾಸಿ**ಗಳಿಗೂ ಬ್ರಹ್ಮವಿದ್ಯೆಯನ್ನು ಹೇಳುವದರಿಂದ ವಿದ್ಯೆಯು ಕರ್ಮಕ್ಕೆ ಅಂಗವಲ್ಲ (೩-೪-೧೭). ಗೃಹಸ್ಥರಿಗೆ ಮಾತ್ರ ಉಪಾಸನೆಯು ಕರ್ಮಸಹಿತವಾಗಿಯೇ ಇರುತ್ತದೆ. ಕರ್ಮಗಳನ್ನು ಪರಮಾತ್ಮನ **ಆರಾಧನ**ರೂಪವಾಗಿ ಮಾಡುತ್ತಿರುವದರಿಂದಲೇ ಉಪಾಸನೆಯ **ಸಾಕ್ಷಾತ್ಕಾರವು** ವಶವಾಗುತ್ತದೆ. ಕುದುರೆಯನ್ನು ಪ್ರಯಾಣಕ್ಕೆ ಉಪಯೋಗಿಸುವಾಗ ಅದರ ಜೀನು ಮುಂತಾದವುಗಳನ್ನು ಹಾಕಿಯೇ ಉಪಯೋಗಿಸಬೇಕಾಗಿರುವಂತೆ (೩-೪-೨೬) ಉಪಾಸನೆಗೂ ಆದರ ಪರಿಕರವಾದ ಕರ್ಮಗಳು ಬೇಕಾಗುತ್ತವೆ. ಗೃಹಸ್ಥನಾದವನೂ **ಶಮಾದಿ**ಗಳನ್ನು ಸಾಧನಮಾಡಬೇಕು ; ಏಕೆಂದರೆ ಅವೂ ಉಪಾಸನೆಗೆ ಬೇಕು (೩-೪-೨೭).

ಆಶ್ರಮಿಗಳಲ್ಲದ ವಿಧುರಾದಿಗಳಿಗೂ ಜಪೋಪವಾಸಾದಿಗಳಿಂದ ಉಪಾಸನೆಗೆ ಸಹಾಯವಾಗುತ್ತದೆ (೩-೪-೩೭).

**ಉಪಾಸನೆಯ ಕ್ರಮ :**

ಉಪಾಸನೆಗಳನು ಏಕಾಗ್ರತೆಗೆ ಅನುಕೂಲವಾದ ಸ್ಥಲದಲ್ಲಿ ಕುಳಿತುಕೊಂಡು ಮಾಡಬೇಕು (೪-೧-೭, ೪-೧-೧೧). ಬ್ರಹ್ಮವಿದ್ಯೆಗಳು ಸದ್ವಿದ್ಯೆ, ದಹರವಿದ್ಯೆ- ಎಂದು ಮುಂತಾಗಿ ಬಗೆಬಗೆಯಾಗಿರುವದರಿಂದ ಅವುಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕು. ಈ ಉಪಾಸನೆಗಳಿಗೆಲ್ಲ ಬ್ರಹ್ಮಾನುಭವಕ್ಕೆ ಅಡ್ಡಿಯಾಗಿರುವ **ಅನಾದಿಕರ್ಮರೂಪವಾದ ಅವಿದ್ಯೆ**ಯನ್ನು ತಿರಸ್ಕರಿಸುವದೇ ಫಲವಾಗಿರುತ್ತದೆಯಾದ್ದರಿಂದ (೩-೩-೫೭) ಯಾವದಾದರೊಂದು ಉಪಾಸನೆಯು ಸಾಕಾಗಿರುತ್ತದೆ. ಶ್ರುತಿಯ ಬೇರೆ ಬೇರೆಯ ಶಾಖೆಗಳಲ್ಲಿ ಆ ಉಪಾಸನೆಗೆ ಸಂಬಂಧಪಟ್ಟಂತೆ ಹೇಳಿರುವ ಬ್ರಹ್ಮಗುಣಗಳನ್ನೆಲ್ಲ ಸೇರಿಕೊಂಡು (೩-೩-೪) ಉಪಾಸನೆಮಾಡಬೇಕು. ಬ್ರಹ್ಮದಲ್ಲಿ ಕೇವಲ **ಆನಂದಾದಿ**ಗಳನ್ನು ಮಾತ್ರ ಉಪಾಸನೆಮಾಡತಕ್ಕದ್ದಲ್ಲ ; ಏಕೆಂದರೆ ಅವು ಪ್ರತ್ಯಗಾತ್ಮನಲ್ಲಿಯೂ ಇರುತ್ತವೆ. ಬ್ರಹ್ಮದಲ್ಲಿ ಮಾತ್ರವೇ ಇರುವ **ಅಸ್ಥೂಲತ್ವ**ವೇ ಮುಂತಾದ ಗುಣಗಳನ್ನೂ (೩-೩-೩೩) ಸೇರಿಸಿಕೊಂಡು ಚಿಂತನಮಾಡಬೇಕು. ಈ ಉಪಾಸನೆಗಳಲ್ಲಿ ಉಪಾಸಕನು ತನಗೆ **ಪರಮಾತ್ಮನು** ಆತ್ಮನೆಂದು ಚಿಂತಿಸಬೇಕು ; ತನ್ನ ಶರೀರಕ್ಕೆ ಹೇಗೆ ತಾನು ಆತ್ಮನೋ ಹಾಗೆ ತನಗೂ ಆ ಬ್ರಹ್ಮವು ಆತ್ಮನು (೪-೧-೩) ಎಂದೇ ಧ್ಯಾನಮಾಡಬೇಕು. ಏಕೆಂದರೆ ಬ್ರಹ್ಮವು ತನಗಿಂತ ಹೆಚ್ಚಿನದಾಗಿದೆ, ತಾನು ಅದಕ್ಕೆ **ಶರೀರ**ವಾಗಿರುತ್ತಾನೆ. ಉಪಾಸನೆಯಲ್ಲಿ ತನ್ನನ್ನು ಕೇವಲ **ಜ್ಞಾತೃ**ವೆಂದೇ ಚಿಂತಿಸಿಕೊಳ್ಳಬಾರದು, ಷ್ಟ- **ಗುಣ**ಗಳುಳ್ಳವನೆಂದೂ (೩-೩-೫೨) ಚಿಂತಿಸಿಕೊಳ್ಳಬೇಕು. ಈ ರೀತಿಯಲ್ಲಿ ಮರಣಾಂತವಾಗಿ ಉಪಾಸನೆಮಾಡಬೇಕು (೪-೧-೧೨).

**ಉಪಾಸನೆಯ ಫಲ :**

ಈ ರೀತಿಯಲ್ಲಿ ವಿದ್ಯೆಯನ್ನು ಅಳವಡಿಸಿಕೊಂಡವನಿಗೆ ಹಿಂದೆ ಮಾಡಿದ್ದ ಪುಣ್ಯಪಾಪಗಳು ನಾಶವಾಗುವವು ; ಮತ್ತು ಮುಂದೆ ಮಾಡಬಹುದಾದ ಪುಣ್ಯಪಾಪಗಳು ಅಂಟದೆ ಇರುವವು (೪-೧-೧೩, ೪-೧-೧೪). ವಿದ್ಯೆಗೆ ಅನುಗುಣವಾಗಿರುವ ಕರ್ಮಗಳು ಶರೀರವು ಬಿದ್ದುಹೋದಮೇಲೆ ನಾಶವಾಗುತ್ತವೆ. ಆದರೆ ಪ್ರಾರಬ್ಧಕರ್ಮದ ಫಲವನ್ನು ಭೋಗದಿಂದಲೇ (೪-೧-೧೫) ಕಳೆಯಬೇಕಾಗುತ್ತದೆ. ವಿದ್ಯಾಸಾಧನವಾಗಿರುವ ಕರ್ಮಗಳು ವಿದ್ಯೆಯನ್ನುಂಟು

ಮಾಡುವದರಲ್ಲಿಯೇ ಕೊನೆಗಾಣುತ್ತವೆ (೪-೧-೧೬). ಪ್ರಾರಬ್ಧಕರ್ಮಫಲವನ್ನುಂಡಬಳಿಕ ಮುಕ್ತಿಯಾಗುತ್ತದೆ.

ಉಪಾಸನೆಗೆ ಅಭ್ಯುದಯವೆಂದೂ ಮುಕ್ತಿಯೆಂದೂ ಎರಡು ಬಗೆಯ ಫಲಗಳಿರುವವು. ಇವುಗಳಲ್ಲಿ ಮೊದಲನೆಯದು ಅಡ್ಡಿಯಿಲ್ಲದಿದ್ದರೆ (೩-೪-೫೦) ಕೂಡಲೇ ಉಂಟಾಗುವದು ; ಮುಕ್ತಿಫಲವೂ ಹೀಗೆಯೇ (೩-೪-೫೧) ಜ್ಞಾನಿಗಳಿಗೆ ಸುಕೃತದುಷ್ಕೃತಗಳು ಮರಣಕಾಲಕ್ಕೆ ನಾಶವಾಗುವವೆಂಬುದು ಸಾಮಾನ್ಯನಿಯಮವಾಗಿದೆ ; ಆದರೆ ಅಧಿಕಾರದಲ್ಲಿ ಪ್ರವಿಷ್ಟರಾದ ವಸಿಷ್ಠರೇ ಮುಂತಾದವರಿಗೆ ಪ್ರಾರಬ್ಧಕರ್ಮವು ಮುಗಿದಿರುವದಿಲ್ಲವಾದ್ದರಿಂದ ಅವರ ಅಧಿಕಾರವನ್ನು ನಿರ್ವಹಿಸುವಷ್ಟು ಕರ್ಮವು ಇದ್ದುಕೊಂಡೇ ಇರುತ್ತದೆ (೩-೩-೩೧).

ಯಾವ ಅಡ್ಡಿಯೂ ಇಲ್ಲದೆ ಉಪಾಸನೆಯನ್ನಳವಡಿಸಿಕೊಂಡಿರುವ .ಬ್ರಹ್ಮಜ್ಞಾನಿಗಳು ಸುಷುಮ್ನಾನಾಡಿಯ ಮಾರ್ಗವಾಗಿ ದೇಹವನ್ನು ಬಿಟ್ಟು (೪-೨-೧೬) ಹೊರಟು ಅರ್ಚಿರಾದಿಮಾರ್ಗದಿಂದ (೪-೩-೧) ಬ್ರಹ್ಮಲೋಕವನ್ನು ತಲುಪುತ್ತಾರೆ (೪-೩-೧೧). ಅಲ್ಲಿ ಅವರಿಗೆ ಅಪಹತಪಾಪ್ಮತ್ವವೇ ಮುಂತಾದ ಗುಣಗಳುಳ್ಳ ಸ್ವರೂಪವು ಹೊರತೋರಿಕೊಳ್ಳುತ್ತದೆ (೪-೪-೧) ; ಕರ್ಮಸಂಬಂಧವೂ ಆದರಿಂದಾಗಿ ದೇಹಸಂಬಂಧವೂ ತೊಲಗುತ್ತವೆ (೪-೪-೨) ; ಜ್ಞಾನಾನಂದವೇ ಮುಂತಾದವು ಮೊದಲು ಕರ್ಮರೂಪವಾದ ಅವಿದ್ಯೆಯಿಂದ ಸಂಕೋಚವಾಗಿದ್ದು ಈಗ ವಿಕಾಸವನ್ನು ಹೊಂದುತ್ತವೆ. ಆಗ ನಾನು ಪರಮಾತ್ಮನಿಗಿಂತ ವಿಭಕ್ತನಾಗಿಲ್ಲವೆಂಬ **ಅನುಭವವು** (೪-೪-೪) ಉಂಟಾಗುತ್ತದೆ.

ಮುಕ್ತರಿಗೆ ಸಂಕಲ್ಪದಿಂದಲೇ ಇಷ್ಟವಾದದ್ದು ದೊರಕುತ್ತದೆ (೪-೪-೮); ಅವರು ವಿಧಿನಿಷೇಧಗಳಿಗೆ ಯೋಗ್ಯರಾಗಿರುವದಿಲ್ಲ (೪-೪-೯). ಮುಕ್ತರಿಗೆ ಸಂಕಲ್ಪಾನುಸಾರವಾಗಿ ಶರೀರೇಂದ್ರಿಯಗಳು ಉಂಟಾಗುತ್ತವೆ ಅಥವಾ ಆಗುವದಿಲ್ಲ (೪-೪-೧೭). ಆದರೆ ಯಾವ ಮುಕ್ತರಿಗೂ ಚೇತನಾಚೇತನಗಳ ಸ್ವರೂಪವನ್ನೂ ಸ್ಥಿತಿಯನ್ನೂ ಪ್ರವೃತ್ತಿಯನ್ನೂ ಕಟ್ಟುಮಾಡುವ ಅಧಿಕಾರವಿರುವದಿಲ್ಲ (೪-೪-೧೭). ಅವರಿಗೆ **ಈಶ್ವರನ ಸಮಾನವಾದ ಭೋಗವು** ಮಾತ್ರ (೪-೪-೨೧) ಇರುತ್ತದೆ. ಹೀಗೆ ಪರಮೇಶ್ವರನೊಬ್ಬನೇ ಸರ್ವತಂತ್ರಸ್ವತಂತ್ರನಾದರೂ ಮುಕ್ತರನ್ನು ಆತನು ಎಂದಿಗೂ ಸಂಸಾರಕ್ಕೆ ಹಿಂದಿರುಗಿಸುವದಿಲ್ಲ. ಇದಕ್ಕೆ ಶ್ರುತಿಯೇ ಪ್ರಮಾಣವು (೪-೪-೨೨).

## ಪರಿಶಿಷ್ಟ -೨

## ಶ್ರೀಮಧ್ವಾಚಾರ್ಯರ ಮತದಂತೆ

# ವೇದಾಂತದರ್ಶನ

**ಅನುಬಂಧ :**

ಅಧಿಕಾರವು ಜಾತಿಕೃತವೆಂದೂ ಗುಣಕೃತವೆಂದೂ ಎರಡು ಬಗೆಯಾಗಿರುತ್ತದೆ. ಮನುಷ್ಯರಲ್ಲಿ ಉತ್ತಮರಾದವರು ಬ್ರಹ್ಮವಿದ್ಯೆಗೆ ಅಧಮಾಧಿ ಕಾರಿಗಳು ; ಋಷಿಗಳೂ ಗಂಧರ್ವರೂ ಮಧ್ಯಮಾಧಿಕಾರಿಗಳು ; ದೇವತೆಗಳು ಉತ್ತಮಾಧಿಕಾರಿಗಳು. ಇದು ಜಾತಿಕೃತವಾದ ಅಧಿಕಾರಿಭೇದವು. ವಿಷ್ಣುಭಕ್ತಿಯಿಂದ ಕೂಡಿರುವವನೂ ಅಧ್ಯಯನಮಾಡಿರುವವನೂ ಆಗಿದ್ದರೆ ಅಧಮಾಧಿಕಾರಿ ಶಮಾದಿಗಳಿಂದೊಡಗೂಡಿದವನು ಮಧ್ಯಮಾಧಿಕಾರಿಯು ಅನಿತ್ಯವೂ ಅಸಾರವೂ ಆಗಿರುವದೆಲ್ಲವನ್ನೂ ಬಿಟ್ಟು ವಿಷ್ಣುವಿನ ಪಾದವನ್ನೇ ನಂಬಿರುವಾತನು ಉತ್ತಮಾಧಿಕಾರಿಯು. ಇದು ಗುಣಕೃತವಾದ ಅಧಿಕಾರಿ ಭೇದವು. ಶ್ರೀಮನ್ನಾರಾಯಣನ ಪ್ರಸಾದದಿಂದಲೇ ಮುಕ್ತಿಯೂ ಆನಂದಪ್ರಾಪ್ತಿಯೂ ಆಗಬೇಕಾಗಿದೆ ; ಜ್ಞಾನವಿಲ್ಲದೆ ಆತನ ಪೂರ್ಣಪ್ರಸಾದವುಂಟಾಗಲೇ ಆರದು. ಆದ್ದರಿಂದ ಜ್ಞಾನಕ್ಕಾಗಿ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕು (೧-೧-೧).

**ಬ್ರಹ್ಮ :**

ಬ್ರಹ್ಮ, ಜೀವ, ಜಗತ್ತು ಈ ಮೂರೂ ಒಂದಕ್ಕಿಂತ ಒಂದು ಭಿನ್ನವಾಗಿರುತ್ತವೆ. ಜಗತ್ತಿಗೆ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಅಜ್ಞಾನ, ಬಂಧ, ಮೋಕ್ಷ- ಇವು ಯಾರಿಂದ ಆಗುವವೋ, ಆ ವಿಷ್ಣುವೇ ಬ್ರಹ್ಮವು (೧-೧-೨). ಬ್ರಹ್ಮವು ಶಾಸ್ತ್ರಪ್ರಮಾಣದಿಂದಲೇ ತಿಳಿಯಬರತಕ್ಕದ್ದು. ಋಗ್ವೇದವೇ ಮುಂತಾದ ನಾಲ್ಕು ವೇದಗಳು, ಭಾರತ, ಪಾಂಚರಾತ್ರ, ಮೂಲರಾಮಾಯಣ- ಇವುಗಳಿಗೆ ಶಾಸ್ತ್ರವೆಂದು ಹೆಸರು. ಈ ಶಾಸ್ತ್ರಪ್ರಮಾಣದಿಂದ (೧-೧-೩) ವಿಷ್ಣುವೇ ಜಗಜನಾದಿಕಾರಣನೆಂದು ತಿಳಿಯಬರುತದೆ. ಉಪಕ್ರಮೋಪಸಂಹಾರವೇ ಮುಂತಾದ ತಾತ್ಪರ್ಯಲಿಂಗಗಳಿಂದ ವಿಷ್ಣುವನ್ನೇ ಶಾಸ್ತ್ರವು ಹೇಳುತ್ತದೆ- ಎಂದು ತಿಳಿದುಕೊಳ್ಳಬೇಕು - ಮತ್ತೆಯಾವದರಲ್ಲಿಯೂ ಶಾಸ್ತ್ರವು **ಸಮನ್ವಯವಾ**ಗುವದಿಲ್ಲ (೧-೧-೪)

ಬ್ರಹ್ಮವು ಶಬ್ದವಾಚ್ಯವಲ್ಲವೆಂದು ತಿಳಿಯಕೂಡದು. ಉಪಾಸಕನು ಪರಮಾತ್ಮನನ್ನು ಕಾಣುತ್ತಾನೆ- ಎಂದು ಶಾಸ್ತ್ರದಲ್ಲಿರುವದರಿಂದ (೧-೧-೫) ಆತನು ಅವಿಷಯನೆಂಬುದೇ ಸರಿಯಲ್ಲ. ಅದ್ಭುತವಾಗಿರುವದರಿಂದ ಅದು ಅವಾಚ್ಯವೆಂದೂ ಅನಂತಗುಣಪೂರ್ಣವಾಗಿರುವದರಿಂದ ಅತರ್ಕ್ಯವು, ಅಜ್ಞೇಯವು- ಎಂದೂ ಶ್ರುತಿಯಲ್ಲಿದೆ (೧-೧-೫). ವಿಷ್ಣುವಿಗೆ ಹೊಂದುವದಿಲ್ಲ ವೆಂದು ತೋರುವ ಹೆಸರುಗಳು, ವಿಷ್ಣುವಿಗೂ ಮತ್ತೊಂದಕ್ಕೂ ಸಾಧಾರಣ ವಾಗಿರುವವೆಂದು ತೋರುವ ಹೆಸರುಗಳು, ಮತ್ತೊಂದಕ್ಕೇ ಹೊಂದುವವೆಂದು ತೋರುವ ಹೆಸರುಗಳು- ಎಲ್ಲವೂ ಮುಖ್ಯವೃತ್ತಿಯಿಂದ ವಿಷ್ಣುವನ್ನೇ ಹೇಳುತ್ತವೆ ಎಂಬುದನ್ನು ಸಮನ್ವಯಾಧ್ಯಾಯದಲ್ಲಿ ತೋರಿಸಿಕೊಟ್ಟಿರುತ್ತದೆ.

ಒಬ್ಬ ವಿಷ್ಣುವೇ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ- ಎಂಬ ನಾಲ್ಕು ಮೂರ್ತಿಗಳುಳ್ಳವನು ; ಅಥವಾ ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ- ಎಂಬ ಐದು ಮೂರ್ತಿಗಳುಳ್ಳವನು. ಆತನನ್ನು ಪ್ರತ್ಯಧಿಕರಣದಲ್ಲಿಯೂ ಪ್ರತಿಸೂತ್ರದಲ್ಲಿಯೂ ಪ್ರತ್ಯಕ್ಷರದಲ್ಲಿಯೂ ಪ್ರತಿಪಾದಿಸಿರುತ್ತದೆ (ಅನು. ೧-೧-೧೨). ಮತ್ಸ್ಯಾದಿರೂಪಗಳು ಪರಮಾತ್ಮನ ಸ್ವರೂಪಾಂಶವಾದ್ದರಿಂದ (೨-೩-೫೦), ಅವರಿಗೆಲ್ಲ ವಿಷ್ಣುವಿಗೆ ಸಮಾನವಾದ ಐಶ್ವರ್ಯವೇ ಇರುತ್ತದೆ. ಜಗಜ್ಜನ್ಮಾದಿಕಾರಣತ್ವವನ್ನು ಹೇಳಿದ್ದರಿಂದ ಪರಮಾತ್ಮನಿಗೆ ಅನಂತಗುಣಗಳಿರುವವೆಂದು ಹೇಳಿದಂತೆ ಆಯಿತು. ಆದರೂ ಬ್ರಹ್ಮವು ನಿರ್ಭೇದವೇ ಆಗಿರುತ್ತದೆ- ಎಂದು ಶ್ರುತಿಯಲ್ಲಿ ಹೇಳಿರುವದಕ್ಕೆ ಕಾರಣವೇನೆಂದರೆ ಗುಣಗುಣಿಗಳಿಗೆ ಭೇದವಿಲ್ಲದಿದ್ದರೂ **ವಿಶೇಷ**ವೆಂಬ ಶಕ್ತಿಯಿಂದ ಭೇದಕಾರ್ಯವುಂಟಾಗಿರುತ್ತದೆ (ಅನು.೧-೧-೨).

ಪರಮೇಶ್ವರನಿಗೆ ಪ್ರಕೃತಿಯಿಂದ ಅಥವಾ ಭೂತಗಳಿಂದಾದ ರೂಪವಿಲ್ಲ; ವಿಜ್ಞಾನಾನಂದಮಾತ್ರವಾದ ರೂಪವುಂಟು. ಅವನಿಗೂ ಈ ರೂಪಕ್ಕೂ ಭೇದವಿಲ್ಲ (೩-೩-೧೫).

## ಬ್ರಹ್ಮವೂ ಜಗತ್ತೂ :

ಜಗತ್ತಿನಲ್ಲಿ ಭಾವರೂಪವಾದ ಪದಾರ್ಥಗಳನ್ನು ಚೇತನವೆಂದೂ ಅಚೇತನವೆಂದೂ ಎರಡು ವಿಭಾಗಮಾಡಬಹುದಷ್ಟೆ. ಚೇತನದ ವಿಷಯವನ್ನು

ಮುಂದೆ ಜೀವರ ವಿಷಯವಾಗಿ ಹೇಳುವಾಗ ವಿವೇಚನೆಮಾಡಲಾಗುವದು. ಅಚೇತನವು ನಿತ್ಯ, ಅನಿತ್ಯ, ನಿತ್ಯಾನಿತ್ಯ- ಎಂದು ಮೂರು ಬಗೆಯಾಗಿರುವದು. ನಿತ್ಯಾನಿತ್ಯಗಳಲ್ಲಿ ನಿತ್ಯಾಂಶವೂ ಅನಿತ್ಯಾಂಶವೂ ಇರುವದರಿಂದ ನಿತ್ಯ, ಅನಿತ್ಯ- ಎಂದು ಎರಡೇ ವಿಭಾಗಮಾಡಿಕೊಳ್ಳಬಹುದು. ನಿತ್ಯಪದಾರ್ಥಗಳಿಗೆ ಮುಖ್ಯಾರ್ಥದಲ್ಲಿ ಉತ್ಪತ್ತಿ ಇಲ್ಲ ; ಅವು ಮೊದಲಿಲ್ಲದೆ ಇದ್ದು ಬಳಿಕ ಉಂಟಾಗುವದಿಲ್ಲ. (೨-೩-೧, ೨-೩-೪) ಪರಾಧೀನವಿಶೇಷಾವಾಪ್ತಿ ಎಂಬ ಉತ್ಪತ್ತಿಯು ಅವಕ್ಕೆ ಇದೆ. ಉದಾಹರಣೆಗೆ ಅವ್ಯಾಕೃತಾಕಾಶ, ಪ್ರಕೃತಿ, ಪುರುಷ, ಕಾಲ, ವೇದ, ಮಹದಾದಿಗಳು- ಇವುಗಳಿಗೆ ಪರಾಧೀನವಿಶೇಷವನ್ನು ಹೊಂದಿರೋಣವೆಂಬ ಉತ್ಪತ್ತಿ ಇದೆ (೨-೩-೮ ರಿಂದ ೧೨). ಅನಿತ್ಯಪದಾರ್ಥಗಳಿಗೆ ಮುಖ್ಯವಾದ ಉತ್ಪತ್ತಿಯೇ ಉಂಟು. ಇಂದ್ರಿಯಗಳು, ಮನಸ್ಸು, ಮುಖ್ಯಪ್ರಾಣ (೨-೪-೧, ೨-೪-೨, ೨-೪-೯) ಎಲ್ಲವೂ ಪರಮಾತ್ಮನಿಂದಲೇ ಉಂಟಾಗುತ್ತದೆ.

ಜಗತ್ತಿಗೆ ವಿಷ್ಣುವು ಕಾರಣವೆಂದರೆ **ನಿಮಿತ್ತಕಾರಣನೇ** ಹೊರತು ಉಪಾದಾನಕಾರಣನೆಂದು ಅರ್ಥವಲ್ಲ. ಪರಮಾತ್ಮನು ವಿಕಾರಿಯಲ್ಲವಾದರೂ ವಿಕಾರಿಯಾದ ಪ್ರಕೃತಿಯಲ್ಲಿ ಹೊಕ್ಕು ಮಹದಾದಿರೂಪದಿಂದ ಪರಿಣಮಿಸುವಂತೆ ಮಾಡುತ್ತಾನಾದ್ದರಿಂದ ಅವನಿಗೆ **ಪ್ರಕೃತಿ**ಯೆಂದೂ ಹೆಸರು (೧-೪-೨೪ ರಿಂದ ೨೭). ಜಗತ್ತಿನಲ್ಲಿ ಆಗುವ ಕಾರ್ಯವೆಲ್ಲವೂ ಪರಮಾತ್ಮನ ಅಧೀನದಲ್ಲಿರುವ ಕಾರಣದಿಂದಲೇ ಆಗುವದು.

## ಬ್ರಹ್ಮವೂ ಜೀವವೂ :

ಜೀವರು ನಿತ್ಯರಾದರೂ (೨-೩-೨೦) ಉಪಾಧ್ಯಪೇಕ್ಷೆಯಿಂದ ಹುಟ್ಟುತ್ತಾರೆಂಬ ವ್ಯವಹಾರಕ್ಕೆ ಅರ್ಹರಾಗುತ್ತಾರೆ. ಅವರಿಗೆ ಈ ಬಗೆಯ ಉತ್ಪತ್ತಿಯು (೨-೩-೧೮) ಪರಮಾತ್ಮನಿಂದಲೇ ಆಗುತ್ತದೆ.

ಜೀವನು ಅಣುಪ್ರಮಾಣನು (೨-೩-೨೦) ; ಅವನು ವಿಶೇಷರೀತಿಯಿಂದ ಹೃದಯದಲ್ಲಿದ್ದುಕೊಂಡು (೨-೩-೨೫) ದೀಪವು ತನ್ನ ಬೆಳಕನ್ನು ಎಲ್ಲಾ ಕಡೆಗೂ ಹರಡುವ ಹಾಗೆ ದೇಹದಲ್ಲೆಲ್ಲ ತನ್ನ ಚಿದ್ಗುಣವನ್ನು ಪಸರಿಸುತ್ತಾನೆ (೨-೩-೨೬). ಹೂವನ್ನುಳಿದು ಅದರ ವಾಸನೆಯು ಬೇರೆಯ ಕಡೆಗೂ ಹೋಗುವಂತೆ (೨-೩-೨೭) ಜೀವನ ಗುಣವು ಬೇರೆಯ ಕಡೆಗೂ ಹಬ್ಬಬಹುದು.

ಜೀವನು ಬ್ರಹ್ಮನಿಗಿಂತ ಭಿನ್ನನು (೨-೩-೨೮), ಜ್ಞಾನಾನಂದವೇ ಮುಂತಾದ ಬ್ರಹ್ಮಗುಣಗಳು ಜೀವನಲ್ಲಿರುವದರಿಂದ ಜೀವಬ್ರಹ್ಮರಿಗೆ ಅಭೇದ ವನ್ನೂ ಶ್ರುತಿಯಲ್ಲಿ ಹೇಳಿರುತ್ತದೆ. ಬ್ರಹ್ಮವು ಸರ್ವಗುಣಾತ್ಮಕವಾಗಿರುವದರಿಂದ ''ಇದೆಲ್ಲವೂ ಬ್ರಹ್ಮವು'' ಎಂದು ಶ್ರುತಿ ಹೇಳುವಂತೆ (೨-೩-೨೯) ಈ ಅಭೇದವನ್ನೂ ಅರಿಯಬೇಕು. ಜೀವನು ಬ್ರಹ್ಮದ ಅಂಶವು (೨-೩-೪೩), ಆದರೆ ಮತ್ಸ್ಯಾದಿಗಳಂತೆ ಬ್ರಹ್ಮದ ಸ್ವರೂಪಾಂಶವಲ್ಲ (೨-೩-೪೬). ಸ್ವರೂಪಾಂಶದಲ್ಲಿ ಅಂಶಿಯ ಸಾಮರ್ಥ್ಯವು ಇರುತ್ತದೆ. ಆದರೆ ಭಿನ್ನಾಂಶನಾದ ಜೀವನು (೨-೩-೪೭) ಪರಮೇಶ್ವರನಂತೆ ಅಚಿಂತ್ಯನಲ್ಲ, ಪೂರ್ಣನಲ್ಲ, ನಿತ್ಯಮುಕ್ತನಲ್ಲ (೨-೯-೪೯, ೫೦).

ಜೀವನು ಕರ್ತೃ (೨-೩-೩೩). ಅವನಿಗೆ ಜ್ಞಾನದಲ್ಲಾಗಲಿ ಕರ್ಮದಲ್ಲಾ ಗಲಿ ಸ್ವಾತಂತ್ರ್ಯವಿಲ್ಲ (೨-೩-೧೭, ೩೮). ಬಡಗಿಯು ಮತ್ತೊಬ್ಬರ ಅಧೀನ ನಾಗಿ ಕೆಲಸಮಾಡುವ ಹಾಗೆ ಪರಮಾತ್ಮನ ಅಧೀನನಾಗಿಯೇ ಅವನು ಕರ್ಮ ವನ್ನು ಮಾಡುತ್ತಾನೆ (೨-೩-೪೦, ೪೧). ಜೀವನ ಪ್ರವೃತ್ತಿಯೂ ಬಂಧ ನಿವೃತ್ತಿಯೂ ಪರಮಾತ್ಮನಿಂದಲೇ ಆಗುತ್ತವೆ (೨-೩-೪೮). ದೇಹಸಂಬಂಧ ವಿರುವದರಿಂದಲೂ ಅಪೂರ್ಣಶಕ್ತಿಯುಳ್ಳವನಾದ್ದರಿಂದಲೂ ಮತ್ಸ್ಯಾದಿಗಳಂತೆ ಸ್ವತಂತ್ರನಾಗಿ ವರ್ತಿಸಲಾರನು (೨-೩-೪೯), ಜೀವರ ಅನಾದಿಕರ್ಮಕ್ಕೆ ತಕ್ಕಂತೆ ಅವರನ್ನು ಈಶ್ವರನು ಪ್ರೇರಿಸುತ್ತಾನೆ ; ಆದ್ದರಿಂದ ಆತನಲ್ಲಿ ಯಾವ ದೋಷವೂ ಇಲ್ಲ.

ಜೀವನ **ಕನಸು** ಕೂಡ ಈಶ್ವರನಿಂದ (೩-೨-೧) ಸೃಷ್ಟವಾಗುತ್ತದೆ. ಪರಮೇಶ್ವರನ ಇಚ್ಛೆಯೆಂಬ ಮಾಯೆಯಿಂದ ಜೀವನ ಮನಸ್ಸಂಸ್ಕಾರಗಳು ಕನಸಿನ ಪದಾರ್ಥಗಳಾಗಿ ಹುಟ್ಟುತ್ತವೆ (೩-೨-೩). ಕನಸು ಅಸತ್ಯವಲ್ಲ, ಶುಭಾ ಶುಭಸೂಚಕವಾಗಿದೆ. ಆದರೆ ಎಚ್ಚರವೆಂದು ಕಾಣುವದು ಮಾತ್ರ ಭ್ರಾಂತಿಯು (೩-೨-೪). ಎಚ್ಚರಕನಸುಗಳನ್ನು ತೋರಿಸುವವನೂ ತೊಲಗಿಸುವವನೂ ಈಶ್ವರನೇ (೩-೨-೫, ೬). ಜೀವನು ತನಿನಿದ್ರೆಯಲ್ಲಿ ನಾಡಿಯಲ್ಲಿರುವ ಪರಮಾತ್ಮನನ್ನು ಸೇರುತ್ತಾನೆ (೩-೨-೭) ; ಅಲ್ಲಿಂದ ಮತ್ತೆ ಎಚ್ಚರವೂ (೩-೨-೮) ಪರಮಾತ್ಮನಿಂದಲೇ ಆಗುತ್ತದೆ. ಮೂರ್ಛೆಯಲ್ಲಿ ಪರಮಾತ್ಮನಲ್ಲಿ

ಅರ್ಧಮಟ್ಟಿಗೆ (೩-೨-೧೦) ಸೇರಿಕೊಳ್ಳುತ್ತಾನೆ. ಪರಮೇಶ್ವರನು ಯಾವ ಅವಸ್ಥೆಯಲ್ಲಿದ್ದರೂ ಒಂದೇ ರೂಪದಲ್ಲಿರುತ್ತಾನೆ (೩-೨-೧೦).

ವಿಷ್ಣುವೇ ಸ್ವತಂತ್ರನು, ಜಗತಿನ ಜನ್ಮಾದಿಗಳಿಗೆ ಕಾರಣನು, ಶಾಸ್ತ್ರವೇದ್ಯನು, ಸರ್ವಶಬ್ದವಾಚ್ಯನು- ಎಂಬ ಸಿದ್ಧಾಂತಕ್ಕೆ ವಿರೋಧವಿಲ್ಲ ವೆಂಬುದನ್ನು ಎರಡನೆಯ ಅಧ್ಯಾಯದಲ್ಲಿ ತೋರಿಸಿರುತ್ತದೆ.

**ಸಾಧನಫಲಗಳು :**

ಜೀವರಲ್ಲಿರುವ ವೈಚಿತ್ರ್ಯಕ್ಕೆ ಅನಾದಿಯಾದ ಅವರ ಜ್ಞಾನಕರ್ಮಗಳೇ ಕಾರಣವು (೨-೩-೫೧). ಜೀವರಲ್ಲಿ ನಿತ್ಯಸುಖಿಗಳು, ನಿತ್ಯದುಃಖಿಗಳು, ನಿತ್ಯಸುಖದುಃಖಿಗಳು- ಎಂದು ಮೂರು ಬಗೆಯುಂಟು (೩-೧-೨೧). ಜೀವರು ತಮ್ಮತಮ್ಮ ಜ್ಞಾನಕರ್ಮಗಳಿಗನುಗುಣವಾಗಿ ಲೋಕಾಂತರದಲ್ಲಿ ಫಲವನ್ನನು ಭವಿಸಿ ಮರಳುತ್ತಾರೆ. ಆದರೆ ಪರಮಾತ್ಮದ್ವೇಷಿಗಳು ತಾಮಿಸ್ರ, ಅಂಧತಾಮಿಸ್ರ- ಎಂಬ **ನಿತ್ಯನರಕ**ಗಳಿಗೆ ಹೋಗುತ್ತಾರೆ (೩-೧-೧೬). ಅಲ್ಲಿ ಬರಿಯ ದುಃಖವೇ ಇರುತ್ತದೆ (೩-೧-೧೯). ಪರಮೇಶ್ವರನು ಎಲ್ಲೆಲ್ಲಿಯೂ ಇದ್ದುಕೊಂಡು ಅವರವರ ಫಲವನ್ನು ಕೊಡುತ್ತಾನಾದರೂ ಅವನಿಗೆ ನರಕದುಃಖವಿಲ್ಲ (೩-೧-೧೭)

**ಮುಕ್ತಿ**ಯೆಂದರೆ ತನ್ನ ಸ್ವರೂಪವು ಹೊರತೋರಿಕೊಂಡಿದ್ದನ್ನು ಅನುಭವಿ ಸುವದು. ಜೀವನ ಜ್ಞಾನಾನಂದಸ್ವರೂಪವು ಮೊದಲು ಅವ್ಯಕ್ತವಾಗಿದ್ದು ಹುಡುಗರಿಗೆ ಯೌವನವು ಬರುತ್ತಲೂ ಗಂಡಸುತನವು ಕಾಣಿಸಿಕೊಳ್ಳುವಂತೆ (೨-೩-೩೧) ತೋರಿಕೊಳ್ಳುವದು. ದೇವತೆಗಳಲ್ಲಿ ಅದು ನಿತ್ಯವಾಗಿ ತೋರು ತ್ತಿರುತ್ತದೆ, ಅಸುರರಿಗೆ ಯಾವಾಗಲೂ ತೋರುವದಿಲ್ಲ, ಮನುಷ್ಯರಿಗೆ ಮೊದಲು ತೋರದೆ ಇದ್ದು, ಬಳಿಕ (೨-೩-೩೨) ಪರಮೇಶ್ವರನ ಅನುಗ್ರಹದಿಂದ ತೋರಿಕೊಳ್ಳುತ್ತದೆ. ಮುಕ್ತಿಗೆ ಕಾರಣವಾದ ಪ್ರಸಾದವು ಭಕ್ತಿಯಿಂದಲೇ ಆಗಬೇಕು (೩-೨-೧೯). ಭಕ್ತಿಜ್ಞಾನಾದಿಗಳಲ್ಲಿ ಹೆಚ್ಚು ಕಡಿಮೆಯೆಂಬ ತಾರತಮ್ಯವುಂಟಾದ್ದರಿಂದ ಅದರಿಂದಾಗುವ ಮುಕ್ತಿಗೂ ಆನಂದಕ್ಕೂ ತಾರತಮ್ಯವಿರುತ್ತದೆ (೩-೨-೨೦, ೨೧). ಪರಮಾತ್ಮನ ಅಪರೋಕ್ಷ್ಯವಿಲ್ಲದೆ ಆತನಲ್ಲಿ ಭಕ್ತಿಯುಂಟಾಗಲಾರದಷ್ಟೆ. ಅಪರೋಕ್ಷ್ಯವು ಕೂಡ ಆತನ ಅನುಗ್ರಹದಿಂದಲೇ ಹೊರತು ಜೀವನ ಸ್ವಪ್ರಯತ್ನದಿಂದಾಗತಕ್ಕದ್ದಲ್ಲ

(೩-೨-೨೩, ೨೪). ಪರಮಾತ್ಮನು ಎಲ್ಲರ ವಿಷಯದಲ್ಲಿಯೂ ಅವ್ಯಕ್ತನೇ ಆದರೂ ಶ್ರವಣಾದ್ಯಭ್ಯಾಸದಿಂದ ಅನಂತಶಕ್ತಿಯುತನಾದ ಆತನು ದರ್ಶನವನ್ನು ಕೊಡುತ್ತಾನೆ (೩-೨-೨೬, ೨೭). ಶ್ರವಣಾದಿಗಳು ಗುರುದತ್ತವಾಗಿರಬೇಕು. ಅವುಗಳಿಂದ ಅಜ್ಞಾನವಿಪರ್ಯಾಸಗಳು ನಿವೃತ್ತವಾಗುವವು (೩-೩-೪೩-೪೪).

ಬ್ರಹ್ಮಾದಿಗಳು ಸರ್ವಗುಣಗಳಿಂದಲೂ ಯುಕ್ತರಾಗಿ ಆತನನ್ನು ಉಪಾಸನೆಮಾಡುವದರಿಂದ ಅವರಿಗೆ ಸಂಪೂರ್ಣಾನಂದವು ದೊರೆಯುತ್ತದೆ. ಮಿಕ್ಕವರಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಆನಂದವು ಸಿಕ್ಕುತ್ತದೆ (೩-೩-೧೧). ಎಲ್ಲಾ ಮುಮುಕ್ಷುಗಳೂ ಆನಂದ, ಜ್ಞಾನ, ಸದ್ರೂಪ, ಆತ್ಮ (೩-೩-೧೨)-ಎಂದು ನಾಲ್ಕು ಗುಣಗಳನ್ನೂ ಉಪಾಸನೆಮಾಡಬೇಕು.

ಮುಕ್ತಿಯಲ್ಲಿ ಅಧಿಕಾರಕ್ಕೆ ತಕ್ಕಂತೆ ಆನಂದತಾರತಮ್ಯವಿರುವದು (೩-೩-೩೩). ಆದರೆ ಒಬ್ಬರಲ್ಲೊಬ್ಬರಿಗೆ ವಿರೋಧಬುದ್ಧಿಯಿರುವದಿಲ್ಲ (೩-೩-೩೪). ಮುಕ್ತರುಕೂಡ ತಮ್ಮ ಇಚ್ಛೆಯಿಂದಲೇ ಕರ್ಮೋಪಾಸನೆಗಳನ್ನು ಮಾಡುತ್ತಿರುವರು (೩-೩-೨೭, ೨೮). ರಮಾದೇವಿಯು ನಿತ್ಯಮುಕ್ತಳಾದರೂ ಉಪಾಸನಾದಿಗಳನ್ನು ಮಾಡುತ್ತಿರುವಳು (೩-೩-೪೧).

ಪ್ರಾರಬ್ಧಕರ್ಮವು ಮುಗಿದಬಳಿಕ ಅರ್ಚಿರಾದಿಮಾರ್ಗದಿಂದ ಹೋಗಿ ಮುಕ್ತಿಯನ್ನು ಪಡೆದವರು ಚಿನ್ಮಾತ್ರದೇಹವನ್ನೂ ಚಿನ್ಮಾತ್ರೇಂದ್ರಿಯಗಳನ್ನೂ ಪಡೆದು ವಿಷ್ಣುವಿನಲ್ಲಿ ಪ್ರವೇಶಮಾಡಿ ಆತನ ಅವಯವಗಳಿಂದ ಅನುಗ್ರಹೀತವಾಗಿರುವ ತಮ್ಮ ತಮ್ಮ ಅವಯವಗಳಿಂದ ಪ್ರವರ್ತಿಸುತ್ತಿರುತ್ತಾರೆ, ಭೋಗಗಳನ್ನು ಅನುಭವಿಸುತ್ತಾರೆ (೪-೪-೭). ಅವರು ತಮಗಿಂತ ಮೇಲುಪಟ್ಟಿರುವವರ ಹೊರತು ತಮಗಿಂತ ಕೀಳಾದವರ ಕೆಳಗೆ ಇರುವದಿಲ್ಲ (೪-೪-೯). ಅವರಿಗೆ ಸಂದರ್ಭಾನುಸಾರವಾಗಿ ಚಿನ್ಮಾತ್ರಶರೀರವೂ ಹೊರಗಿನ ಶರೀರವೂ ಇದ್ದುಕೊಂಡಿರುತ್ತದೆ (೪-೪-೧೨). ಸೃಷ್ಟ್ಯಾದಿವ್ಯಾಪಾರಗಳು ಹೊರತು ಮಿಕ್ಕ ವ್ಯಾಪಾರಗಳೆಲ್ಲವನ್ನೂ ಅವರು ನಡೆಯಿಸುವರು (೪-೪-೧೭). ಅವರ ಆನಂದವು ಸಾಧನಪ್ರಾಪ್ಯವಾಗಿರುವದಿಲ್ಲ, ಏರಿಳಿತವಿಲ್ಲದೆ ಒಂದೇ ರೂಪವಾಗಿ ಸಿದ್ಧವಾಗಿರುತ್ತದೆ (೪-೪-೨೧). ಆದರೆ ಭೋಗವೈಚಿತ್ರ್ಯದಿಂದಾಗುವ ಆನಂದದ ವಿಶೇಷವುಂಟು (೪-೪-೨೨). ಮುಕ್ತರಾದವರು ಮರಳಿ ಸಂಸಾರಕ್ಕೆ ಬರುವದೇ ಇಲ್ಲ (೪-೪-೨೩).

# ಕೆಲವು ಉಪಯುಕ್ತಗ್ರಂಥಗಳು

( ಶ್ರೀಶ್ರೀಗಳವರ ಕೃತಿಗಳು )

೧. **ಶಾಂಕರವೇದಾಂತಪ್ರಕ್ರಿಯೆ** : ವೇದಾಂತಾಭ್ಯಾಸವನ್ನು ಮಾಡುವವರು ಅವಶ್ಯವಾಗಿ ತಿಳಿದಿರಬೇಕಾದ ಶುದ್ಧವೇದಾಂತಪ್ರಕ್ರಿಯೆಯ ರೂಪರೇಷೆಯನ್ನು ಇಲ್ಲಿ ವಿವರಿಸಿದೆ.

ಮೂರನೆಯ ಮುದ್ರಣ : 1989 : ಪು. ಕ್ರೌ. (6+92)

೨. **ಪರಿಶುದ್ಧವೇದಾಂತಸಾರ** : ಶಾಸ್ತ್ರದೃಷ್ಟಿ, ಸಾಕ್ಷಿಸ್ವರೂಪ, ಅದ್ವಿತೀಯತ್ವ - ಈ ಮೂರು ವಿಷಯಗಳನ್ನು ಜಿಜ್ಞಾಸುಗಳಿಗೆ ಮನದಟ್ಟಾಗುವಂತೆ ಸುಲಭಶೈಲಿಯಲ್ಲಿ ಬರೆದಿದೆ.

ಎರಡನೆಯ ಮುದ್ರಣ : 1963 : ಪು. ಕ್ರೌ. (6+40)

೩. **ಶಾಂಕರವೇದಾಂತದ ಮೂಲತತ್ತ್ವಗಳು** : ೧೯೬೬ನೆಯ ಇಸವಿಯಲ್ಲಿ ದಾವಣಗೆರೆಯಲ್ಲಿ ನಡೆದ ಶಂಕರಸಪ್ತಾಹದ ಸಂದರ್ಭದಲ್ಲಿ ಶ್ರೀಶ್ರೀಗಳವರು ಅನುಗ್ರಹಿಸಿದ ೨೧ ಉಪನ್ಯಾಸಗಳಿವೆ. ಶಂಕರರ ಪರಮ ಸಿದ್ಧಾಂತವನ್ನರಿಯಲು ಈ ಗ್ರಂಥದ ಅವಲೋಕನವು ಸಹಕಾರಿಯಾಗಿದೆ.

ಎರಡನೆಯ ಮುದ್ರಣ : 1988 : ಪು. ಡೆಮ್ಮಿ. (4+112)

೪. **ವೇದಾಂತಬಾಲಬೋಧೆ** : ಶಂಕರಾಚಾರ್ಯಕೃತ **ಪ್ರಾತಃಸ್ಮರಣಸ್ತೋತ್ರಕ್ಕೆ** ಸಂಭಾಷಣೆಯ ರೂಪದಲ್ಲಿ ವಿಸ್ತಾರವಾದ ಕನ್ನಡ ವಿವರಣೆಯನ್ನು ಕೊಟ್ಟಿದೆ. ವೇದಾಂತವಿಚಾರವನ್ನು ಪ್ರಾರಂಭಿಸುವವರಿಗೆ ಅನುಕೂಲವಾಗಿದೆ.

ನಾಲ್ಕನೆಯ ಮುದ್ರಣ : 1992 : ಪು. ಕ್ರೌ. (6+40)

೫. **ವೇದಾಂತಪ್ರವೇಶಿಕೆ** : ಆಚಾರ್ಯಕೃತ **ಅದ್ವೈತಪಂಚರತ್ನ** ಸ್ತೋತ್ರದ ವಿವರಣೆಯಿದೆ. ಆತ್ಮನು ಸಂಸಾರಧರ್ಮರಹಿತನು, ಪ್ರಪಂಚವು ಅವನಿಗಿಂತ ಬೇರೆಯಿಲ್ಲ - ಎಂಬುದನ್ನು ಮನಗಾಣಿಸುವದು.

ಮೂರನೆಯ ಮುದ್ರಣ : 1983 : ಪು. ಕ್ರೌ. (6+70)

೬. **ದಕ್ಷಿಣಾಮೂರ್ತಿಸ್ತೋತ್ರ** : ನಮ್ಮಗಳ ಆತ್ಮನು ಅದ್ವಿತೀಯಕೂಟಸ್ಥ ನಿರ್ವಿಶೇಷಚೈತನ್ಯಸ್ವರೂಪನು ಎಂಬುದನ್ನು ಹೃದಯಂಗಮವಾಗಿ ವಿವರಿಸಿರುತ್ತದೆ. ಮೂಲಶ್ಲೋಕ, ವಿವರಣೆಗಳಿವೆ.

ನಾಲನೆಯ ಮುದ,ಣ : 2001: ಪು. ಡೆಮಿ. (4+72)